ಪವಿದಂಡಗಳ । ನೋಸೆದುಪಿಡಿದತುಳಭುಜಬಲಪರಾಕ್ರಮಪೇವದಾನವಾದಿಗಳ ಬಿಡದೇ ॥ ಕುಸುಮತಳಿರಿಂದೆಚ್ಚುಕುಸುರಿದರಿದಳಿಕಿಸುತ । ಶಿವದನೆಯುರ ತೋಳುತೊಡೆಮರೆಯೊಳಡಗಿಸುವ । ವಸುಧೆಯಿಾರೇಳುಲೋಕಮನಾಣ್ಮ ನೃಪಕಾಮಚಕ್ರೇಶನೆಡೆಗೊಂಡನೂ ॥ ೪೬ ॥ ತಡೆಯದ್ವೈತನ್ನಂಚೆಕೋಂಚೆ ಕೋಳಿರ್ವಕ್ಕಿಚಯ। ವಡನೇರಿಬಕನಿಕರಕಲರವಚಕೋರಾಳಿ। ಗಿಡಬಟಿಟ್ಟಿ ಭಗುಂಡುಮುಳುಗಟಿಳರ್ವಶುಕಪಿಕಚಂಚರೀಕಸಮೂಹಾ ॥ ಬಿಡದೆಯುಚ್ಚ ರಿಸುತ್ತಲಿಬ್ಬಿಸುವನವಿಲ್ಗೊಳೆ। ಬಿಡದೊದರೆಕೌಜುಕ್ಕೈವಾರಿಸಲಂತಮತಮಗೆ॥ ಕಡುಬೇಗಕೂಡಿತ್ತುಚತುರಂಗಪಿಂದುಮುಂದಿಕ್ಕೆಲದೊಳೂತ್ತರಿಸುತೇ॥೪೭। ಯನ್ನಮುಂಗೈಯ್ಯಜಾಣ್ಣಡಿಯಕನ್ನಡಿವಕ್ಕಿಜೊನ್ನೊಡಲಸಂಪೂರ್ಣವಕ್ತ್ರ ಸರಸಿಜನೇತ್ರ । ಪನ್ನಗಾವೇಣಿಪಲ್ಲವಪಾಣಿಮೃದುವಾಣಿ ಸ್ತ್ರೀಕುಲಕಡಾಣಿ ಜಾಣೀ॥ ಚನ್ನಾಗಿಕೇಳುಮನ್ಮಥಮಹಾರಾಯನ। ತ್ಯನ್ನತಮಹಾಶೌರ್ಯದಿಂ ದೆಸೈನ್ಯಂಗೂಡಿ । ತನ್ನಕುಸುಮಾವತಿಯನುಳಿದು ಶಿವನಿರುತಪೋವನದತ್ತ ನೆಡೆಗೊಂಡನೂ ॥ ೪೮ ॥ ಯಿದುವೆಬಾಣಾಖ್ಯಸಾಯೂಜ್ಯಪ್ರಬಂಧಮ । ತ್ತಿದುವೆನವಮೋಹನತರಂಗಿಣಿಯಭಿಧಾನ। ವಿದನುಶ್ರೀಕೋಳೂರುರಾಮೇ ಶಮಡಿಪಿದೊಡೆಪೇಳ್ದ ಶಂಕರನುವೊಲಿಯಿದನು ಸರಸೋಕ್ತಿಯಿಂಬರದೋದಿ ಪೇಳ್ಕೇಳ್ವ । ಸದುಹೃದಯರಾದಸತ್ಪುರುಷರಿಗೆಸಂತಸದಿ। ಕುಧರಜಾರ್ಧಾಂ ಗಸೌಭಾಗ್ಯಸಂಪದಸೌಖ್ಯವಿತ್ತುರಕ್ಷಿಸುವಬಿಡದೇ ॥ ೪೯ ॥

ಅಂತುಸಂಧಿ ೫ ಕ್ಕಂ ಪದನು ೨೦೭ ಮಂಗಳಮಹಾ.

॥ ಶ್ರೀ ಶ್ರೀ ಶ್ರೀ ॥

ಶ್ರೀರಸ್ತು.

ಶ್ರೀಗುರು ಬಸವಲಿಂಗಾಯನಮಃ

ಮನ್ಮಥದಹನ.

|| ಪಲ್ಲವಿ ||

ಸ್ಮರನಖಿಳಸೈನ್ಯಂಗೂಡಿ ಪೋಗುಗ್ರತರತಪೋಮೂರ್ತಿಯಂ ಕೆಣಕಲತಿಕೋಪದಿಂ । ದುರಿಗಂಣಿನಿಂದಹಿಸಲಾವಾರ್ತೆಗೇಳಿರತಿಬಂದುಪಲುಬುತ್ತಿರ್ದಳೂ ||

ಪದಾ || ಶ್ರೀಮದಗಜಾನನರವಿಂದಭಾಸ್ಕರಮುನಿ । ಸ್ತೋಮಹೃದ್ಗೇಹನಿರ್ಮಲನಿವಾತಜ್ಯೋತಿ । ವ್ಯೋಮಧುನಿತರಳ ವಿಚಿತ್ರರಾಜಿತಜಟಾಪಟಲಶೋಭಿತಮಸ್ತಕಾ || ಸೋಮಶಕಲಾಕಲಾಭೂಷವಾಯುಭುಗ್ಭರಣ । ಸಾಮಗಾನವಿಲೋಲಸರಸಿಜಾಸನಗರ್ವ । ಭೂಮಿಧರದಳನಪವಿಶರಣಸುರಪಾದಪನೆಪಾಹಿಮಾಂರಾಮೇಶ್ವರಾ ||೧|| ಹರಿಯಜೇಂದ್ರಾದಿಸುರಮುನಿಗಳೋಲೈಸುತಿರೆ । ತರಣಿಶತಕೋಟಿಪ್ರಭಾಮಯದಸಿಂಹ್ವಲಿ । ಷ್ಟೈರದಾಗ್ರಶಿವನಯಡದೊಡೆಯೊಳಂಕುಳಿತಭವನಾನನವನೀಕ್ಷಿಸುತಿರೇ || ಭರದಿಂದಲೈದಿಮೆಲುದನುವಾಸರಿಸುತ್ತೆ । ಕರಿಮೊಗಂಸುಂಡಲದಿಸ್ತನ್ಯಪಾನಂಗೈವ್ರು । ತಿರಲೀಶದರಹಸಿತನಾಗೆನಾಙ್ಬುತ್ತೆಶರಗಬಾಚಣಿಸಿದಗಜೆಸಲಹಾ ||೨|| ಯಲೆಕಾಂತನಿನ್ನ ಸವಿವಚನವರುಷಂಗರೆಯೆ । ನಲವಿಂದಲೆನ್ನ ಹೃದ್ಧರಣಿಯತಿಪದಗೊಂಡು || ಯಲಘುಸದ್ಭಕ್ತಿಬೀಜಾಂಕುರಿಸಿಸುಜ್ಞಾನಲತೆಪರ್ಬಿಪಲ್ಲವಿಸುತೇ || ಸಲೆಶರಣಸಂಗಸದ್ವಾಸನೆಯುಪ್ಪುವುಮಾತು । ಕಲಿತವೈರಾಗ್ಯಯಳೆಗಾಯಾಗಿಸನ್ಮುಕ್ತಿ ಪಳಮುಸವಿದುಂಡುಸುಖಿಪಂತೆ ಸವಿಮೇಲ್ಗಥೆಯಬಿತ್ತರಿಸುಚಿತ್ಕಾಂತನೇ || ೩ || ಸ್ವಾತಿಬಲ್ವನಿಬಿಂದುಶುಕ್ತಿಗರ್ಭದಿಬಿದ್ದು । ಮಾತ್ರದೊಳ್ತನ್ನಪೂರ್ವದಗುಣವುನುಳಿದಮಳ । ಜ್ಯೋತಿಮುತ್ತಾದಂತೆಯೊಪುಣ್ಯಾಸತ್ಕಥೆಯಸಾರಾಮೃತವನೀಗಳೂ || ಶ್ರೀತಳೋದರೆನಿನ್ನ ಕಿವಿಗಿಬ್ಬಚಿಪ್ಪಿನೊಳು । ಪೋ

ತುಪ್ರವೇಶವಾಗಲುಪೂರ್ವದುಷ್ಕೃತದ । ಭೀತಿಯಳಿಗಳೆದುಪುನೀತಳಾಗಿ
ಪೆಳೆಳುಕಂಬುಕಂಧರಿಸುಂದರೀ ॥ ೪ ॥ ಚಕಿತಮರಿಹರಿಣಲೋಚನೆಕೇಳು
ಮುಂಗಪೆಯು । ನಕಳಂಕಮನ್ಮಥಮಹಾರಾಯತವಕದಿಂ। ದಖಿಳವಾರ್ಬಲವ
ನೊಡಗೊಂಡು । ನಡೆತಂದನದ್ಭುತವಾದುದೇವೇಳೆನೂ ॥ ಸಕಲಭೂಭುಜರು
ಗಳವಡೆನಡೆವದಿಳೆಯಾಗ್ರ । ಮಕರಕೇತನಮಹಾಸೇನೆಧರೆಸೋಂಕದವ್ರಕ।
ಟವಿಂಗಗನವಾರ್ಗಮನಡರ್ದುಮಾರ್ತಾಂಡಮಂಡಲಮನಂಡಲೆವುತೇ ॥ ೫ ॥
ಪರಿಪರಿಯುಪಕ್ಷಿಪಕ್ಷಂಗಳಿಂದುಚ್ಚಳಿಸು । ತಿರದೆವಿಲಯಾನಿಲನಯಿಮ್ಮಡಿಗೆ
ಪೇರ್ಚೆ । ಮೊರೆದೆದ್ದುಸುತ್ತಿವಿಯತ್ತಳವತಿಗುರಿದಿರುಗಿಸುತೆತಾರಾಳಿಯುದು
ರೇ॥ ಶರಧಿಸಪ್ತವಕದಡಿಪೇರ್ದೆರೆಗಳೆಬ್ಬಿಸುತೆ।ತರುಗಿರಿಗಳಂಮೂಲಸಹಿತಕೀ
ಳ್ದಾಗಸಕೆ । ಭರದಿಯೆಬ್ಬಿಸುತೆತರಗಿನತೆರದಿಗಗನಾಂಗಣದಿಹರಹಿಭೋರ್ಗರೆ
ವುತೇ ॥ ೬ ॥ ಭೂವಲಯಮನ್ನೆರೆಕುಲಾಲಚಕ್ರಂತಿರುಗು । ವೋಲುತಿರ್ರನೆ
ತಿರುಗಿಸುತೆದಿಕ್ಪರಗ । ಳಾವಿಗಡಜಂಝಾವಾರುತನೊಡನೆವಾರ್ದುಗಗನಾಗ
ಣದಿಸುಳಿಗೊಂಡಿರೇ ॥ ದಾವಾಗ್ನಿಪೇರ್ಚಿಳಾಮಂಡಲವದಹಿಸುತಿರ । ಲಾನಾ
ರಿಧರೆಗಳೊಡಲೊಡದುಪೇರ್ವರುಷಗರೆ। ದಾವರಿಸಲೊಡನೆದಳ್ಳುರಿಯತಿಶಾಂತಿ
ಯೊದುದುಮದೇನೆಂಬೆನೂ॥೭॥ಪಚ್ಚೆಯುದಸತ್ತಿಗೆಯೊಬೆಳ್ಗೊಡೆಗಳೋನೀಲ।
ದಚ್ಚಮೇಲ್ಪಳೆಗಳಂಪಿಡಿದುಬಪ್ಪಂದದಿಂ । ಗಚ್ಚೊಡೆಯದ್ವೈತರ್ವಗಿಳಿರ್ವಿಂಡು
ಚೆಳರ್ವಕ್ಕಿನೀಲಾಳಿಪ್ರತ್ಯೇಕದೀ ॥ ಸ್ವಚ್ಚದಿವ್ಯೊತ್ತಮೊತ್ತಂಗಟ್ಟೆಯುಗಲ
ದೆ । ಮುಚ್ಚಿಗಗನಾಂಗಣಮರವಿಕಿರಣಕೆಡೆಗೊಡದೆ । ಕೆಚ್ಚಲುರೆಗತ್ತಲೆಯು
ಮನ್ಮಥಮಹಾವೀರನತುಳಪ್ರತಾಪಬಿಸಿಲಿಂ ॥ ೮ ॥ ಬೆಳಗುಭುವನಕ್ಕೆಪಸರಿಸ
ಲಖಿಳಖಗಸೇನೆ । ಗಳರವಂಸಪ್ತಕೂಪಾರದುಘೋಷಮುಮ । ಸುಳಿದುದಶ
ದಿಗ್ವಳಯದೋಳ್ತಿವಿಪೂರೈಸೆಮರುತಪತಿಯಿಟ್ಟಣಿಸಲೂ ॥ ಬಲುಗಮನದಿಂತ
ಪೋವನವನರಸುತಮಂದ । ನಿಲಮುಂದುವರಿಯೆಹಿಮವಸಂತಚಂದ್ರಮರೊಡ
ನೆ । ನಳಿನಾಸ್ತ್ರವೋಸಮಾ ಯಾಬಲೆಯುಬೀಸುತ್ತೆಬರುತಿರ್ದನತಿಶೌರ್ಯ
ದೀ ॥ ೯ ॥ ಚಿತ್ತಭವನಧಿಕದಂಡೆತ್ತಿಬರವರಲು ॥ ಅತ್ತಶಿವನಿಹತಪೋವನದ
ಮಹಿಮೆಯನೇನ । ಬಿತ್ತರಿಪೆಮುಂಗುಲಿಯುಉರುಗಗರುಡಂಹರಿಣಹುಲಿ
ಯಾನೆಶಿಂಹತವ್ಮಾ ॥ ಶತೃತ್ವಮುಳಿದುಯತಿವಿನಯದಿಂಬಾಳ್ದಪವು । ಮ
ತ್ತೆಯುತಪೋದನದಿವ್ಯಾಶ್ರಮಂಗಳಲಿ । ಮತ್ತವಾರುತರಜಮನುಡುಗುವ
ನುಮದಹಸ್ತಿಪುಷ್ಕರೋದಕಪತಂಡಾ ॥೧೦॥ ಚಳೆಯನುರೆಚಲ್ಲುವವ್ರುಬಗ್ಗ

ಮರಿಗಳುವಿವಿದೆ । ಯೊಲಿದುಪೊತ್ತದಕುವವುಭಲ್ಲುಕಂಗಳುಪೋಗಿ । ನೆಲಗೆದರಿಕಂದಮೂಲಾದಿ ಗಳತಂದ ಪವುಕಪಿನಾಯಕರುಪರಿಪರಿಫಳಪಕ್ವ ಮರಿದುತಂದಿತ್ತಪವುಮಯೂರ ನೆಳಲಗೊಳಿಪವುತಮ್ಮಗರಿಯು ಪಸರಿಸಿ ನಿಂದುಯುಲರುಣಿಗಳುಂಪೆಡೆ ಯಪಿಡಿವಿರು ತಿಹವುಚಮರಿಚೌರಿಯಬೀಸಲೂ ॥ ೧೧ ॥ ಬಿರಿಘಾಳಿಬೀಸಲುಮಳೆಚಳೆಯುಬಳ್ಗೆ ೀಸಗೆಯು। ವುರಿವದಾವಾಗ್ನಿಮುಂತಾದುಗ್ರ ಜಂತುಗಳು ಕರಬೆದರಿತತ್ತಪೋವನವಪೋಗಲಂವಂದೆದೂರದೂರದೊಳಿರ್ದವೊ ॥ ಪರಬ್ರಹ್ಮನಾದತಮ್ಮೊಳುಲಾಲಿಪುದನುಳಿದು । ಪೊರವಳೆಯತುಂಬಿರ್ಘೀಂಕಾರನಾದಧ್ವನಿಯು । ಹರುಷದಿಂಕೇಳಿಪರವಕರಾಗಿ । ತ್ರಮ್ಮನಮ್ಮರದಿರ್ದರಾಯತಿಗಳೂ ॥ ೧೨ ॥ ವಲಿದುಶಿವಶೈವಪಂಚಾಕ್ಷರಿಯಪುರಶ್ಚರಣೆ । ಯುಳಿದುಸುಸ್ವರದಿಮುನಮುಳುಗಿಲಾಲಿಸುವಂತೆ । ಕಳಂಕರನಿಚಯುನ್ಮುಧ್ವನಿಯಿಂದೆಕೂಗುತಿರ್ದವುಕೂಡೆತದ್ವನದೊಳೂ ॥ ಲೀಲೆಯಿಂಶುಕನಿಕರಮೃದುಮಧುರನುಡಿಗಳಿಂಬರಲುರಪಂಗ್ಯೈವುತಿರೆಶೃತಿ ಪಾರಾಯಣಂಮರೆದು। ನಲುವಿಂದತದ್ವಿನಯವಾತುಗಳಲಾಲಿಸುತಿರ್ದರಾಗಮಪರಣರೂ॥ ಅತ್ರಿಕಸ್ಯಪನಭಾರದ್ವಾಜಮರೀಚಿವಿಶ್ವಾ। ಮಿತ್ರವಾಸಿಷ್ಟಭೃಗುಮುಖ್ಯಖಿಲವಿಮಳಸುಪವಿತ್ತರುಷಿಗಣರುಜಪತಪುರಶ್ಚ ರಣೆಯಿಂದೆಲ್ಲಪರಶುದ್ಧಿವಡೆದೂ॥ಧಾತ್ರಿಗುತ್ತಮತುಂಗಭದ್ರಾನದಿಸ್ನಾನ । ಚಿತ್ರದಿಂಗೈದುಭಸಿತೋದ್ಧೂಳನದಿಶೌಚ । ಗಾತ್ರರಾಗುತ್ತೆ ಶಿವನಕ್ಷಿಮಣಿಮಾಲೆಗಳನಳವಡಿಸಿಮುಂತೊರ್ಕೀಕ್ತದೀ ॥ ೧೪ ॥ ಪರಮನಿರ್ಮಲಹೃದಯರಾಗಿಬಳಿಸಂದುಬಂಧುರಹೇಮಕೂಟಾದ್ರಿತಪ್ಪಲತಪೋವನದಿ । ಪರಮಕಾಷ್ಟೆಯೊಳಿರ್ಪಪರಮೇಶ್ವರನಪುಣ್ಯದರ್ಶನವಕೊಂಡರ್ಚಿಸೀ ॥ ತಿರುಗಿತಮತಮ್ಮಯಾದಿವ್ಯಾಶ್ರಮಂಗಳಲಿ । ಪರಿಪರಿಯಜಪತಪಸಮಾಧಿ ಹೋಮಾನೇಮವಿರದೆಯಾಚರಿಸುತ್ತಯನವರತಪಕ್ವಫಳತರಗಿನುಪಹಾರದಿಂದೇ ॥ ೧೫ ॥ ಯಿಂತಹತಪೊವನದಮಧ್ಯದೊಳುಶ್ರೀವುಮಾ । ಕಾಂತ್ತನುಬಹುತಪೋಧನರು ಯತಿಕಾಷ್ಟೆಯಿಂದತಮ್ಮುವಂಮರೆದುಹಸಿವುತೃಷೆನಿದ್ರೆಮುಖ್ಯಾವಸಿಗಳನೆಲ್ಲತೊರೆದೂ॥ ಕಂತುಕಾಲರಭಯವಶಂಕಿಸದೆಪರಬ್ರಹ್ಮವಂತರಂಗದಿ ಬೆರೆದುಸ್ವತ್ಕಮಲಮಧ್ಯನಿ । ಶಾಂತಾತ್ಮಜ್ಯೋತಿಸತ್ಪ್ರಾಣಲಿಂಗಧ್ಯಾನದಿನಿತ್ಯಸುಖದೊಳಿಹರೂ ॥ ೧೬ ॥ ಕುಂಭಕುಂಭಸ್ತನಾನ್ವಿತೆಕೇಳುತ್ರಿಜಗ । ದಾಂಬೆಗೌರಾಂಬಿಕೆಯುದಕ್ಷಯಾಗದಿತನುವ । ನಂಬಯುಲುಗೊಳಿಸಲೀಶನುಶಕ್ತಿರಹಿತರ್ಗೆಸಂಸಾರಮ್ಯಾಕೆನುತ್ತೇ ॥

ತಾಂಬಿಟ್ಟುದೇವತಾಕರ್ತೃತ್ವಮುಮಪ್ಪೊಂಪೆ । ಗಂಬಂದುಹೇಮಕೂಟವನಿ
ರ್ಮಲಸ್ಥಾನದಿಕುಳಿತುಯಾತ್ಮಜ್ಯೋತಿರ್ಲಿಂಗದೊಳ್ಬೆರನಿರೇ ॥ ೧೭ ॥ ದಕ್ಷ
ಯೋಗದಿನಪುವಬಯಲಿಗ್ಗೊಳಿಸಿಮೇನಕಿಯ। ಕುಕ್ಷಿಯಿಂಸಂಜನಿಸಿಬೆಳಿಯೆನಾ
ರದನೈದಿ।ದಾಕ್ಷಾಯಣಿಯುಯಿಳಕೆಪತಿಯಿಳನಿಹತಪೋವನದಿಯಲ್ಲಿಗೆಕಳುಹೆ
ನೇ ॥ ಆಕ್ಷಣದಿಗಿರಿರಾಜಸುತೆಯನೊಡಗೊಂಡುಪೊಂ। ಪಾಕ್ಷೇತ್ರಕೈದಿಶ್ರೀ
ಹೇಮಕೂಟದಿವಿರೂಪಾಕ್ಷನತಪೋಮೂರ್ತಿದರ್ಶನಂಗೊಂಡುಪೊಂದಿಸಿನುತಿ
ಸಿಶ್ರೀಪದಯುಗಾ ॥ ೧೮ ॥ ಕಮಲಗಳಗಿರಿಜಾತೆಯಿಂದ ಲಾರ್ಚನೆಗೈಸಿ।
ಹಿಮಗಿರೀಶ್ವರನಂದಿಗರುಹಿನಿತ್ಯದಿನಿನ್ನ।ರಮಣನಂಘ್ರಿಯನುಸದ್ಭಕ್ತಿಯಿಂಭ
ಜಸಿಪೊಲಿಸುವದೆಂದುಪೇಳಿಪೋಗೇ ॥ ಕ್ರಮವಿಡಿದುನಿತ್ಯಾರ್ಚನಂಗೈವುತಿರಲಿ
ತ್ತ। ಸುಮಶರನಸೇನೆಯುಮುಂದುವರಿದೈತರ್ಪ ಸಮಯದಿ । ವಸರಿತತ
ದ್ವನವನುರೆಪೊಕ್ಕುಚಿಗುರಿಸಲೊಡನೆಚೈತ್ರನೈದೀ ॥ ೧೯ ॥ ವರಕುಸುಮವಿ
ಡಿಗಾಯಿವೆಣ್ಣುಗಳನಾಗಿಸಲು । ಭರದಿಂದಮಂದಮಾರುತನುವಳಪೊಗುತಲ್ಲಿ।
ಯರೆವಿರಿದಪುಷ್ಪಚಯದಮಳಪೊಸಪರಿಮಳವತದ್ವನದೊಳಂಹರಹಲೂ ॥
ಯರಗಿಬಂಡುಂಡುಬ್ಬಿರ್ಝೇಂಕರಿಪಭ್ರಮರಾಳಿ। ಯಿರದೆತಳಿರ್ದಿಂದುಕೋಗಿ
ಲೆನೀಕಸೊರ್ಕಿಸು ಸ್ವರಗೈಯ್ಯೆಸುಕರಪಕ್ವಮಾವಂಣುಗಳಕದ್ದಂಕ್ಕಿಮ
ಧುರಸವಪೀರ್ದೂ ॥ ೨೦ ॥ ಬಲಮದಂತಲೆಗಡರಿತಮುತಮಗೆವಾದಿಸುತೆ। ನಲು
ವೇರಿಯುತಿವಿನಯಮೃಧುಮದುರನುಡಿಗಳಿಂ । ದುಲಿವುತಿರೆತಪಸಿಗಳಕಿವಿಗಿಂ
ಪುಮೈಯ್ಯೊಳತಿತಂಪುನಾಸಿಕದಿಕಂಪೂ॥ ವಳಪೊಕ್ಕುಯಿಂದ್ರಿಯದ್ವಾರಂಗಳ
ಲಿಹೃತ್ಸರಸಿ। ಕಲಕಿನಿಶ್ಚಲಚಿತ್ತವಿಕಸಿಸಿಯೆಕರಣಾಳಿ। ನೆಲೆದಪ್ಪಿಮನೋನಿ
ಲನಬೆರದುಸಂಚಲಿಸಲುತಪೋನೈಷ್ಠಿಕಾಷ್ಠೆಮುರಿದೂ ॥ ೨೧ ॥ ನೆನಹುಮ
ನವಾವರಿಸೆಭ್ರಮರಂಚೆಕೊಡಚೆಶುಕ ॥ ವಿನುತಕೋಗಿಲೆಮುಖ್ಯಯಖಿಳಾಂ
ಡಜಾತಾಂಡ। ಧ್ವನಿಗೈಯ್ಯುವಿನಯನಾದಮಗೇಳಿಮುಗಿದಕಂಣುಗಳಮೆಲ್ಲನೆ
ತೆರೆಯಲೂ ॥ ಅನಿತರೊಳುಮಾರೇಕ್ಷುಚಾಪಕೆಭ್ರಮರಸಿಂ। ಜನಿಗೊಳಿಸಿಜೀ
ವಡಿಯೆ। ಹೃದಯತಲ್ಲಣಗೊಂಡು । ತೆಸತನಗೆವಿರಹಾಗ್ನಿವೆಗ್ಗಳಿಸಿಸಿಂಹ
ನಾದಂಗೇಳ್ದಹಸ್ತಿಗಳೊಳೂ ॥ ೨೨ ॥ ಬೆದರ್ದುತಡವರಿಸುತ್ತೆಪುಲಿಸುಳುಹಿ
ಗಂಹರಿಣ। ಯದೆಗೆಟ್ಟುಹಿಂಡೊಡೆದುಚಲ್ಲವರಿದಂದಧಿಂ। ಸುಧೆವಿಲ್ಲನಾಜ್ಞಿ
ಯಿಂಪಿಮುಮಂಜುಳಶಿಮಂದಾನಿಲರಯಟ್ಟುಳಿಗಾರದೇ ॥ ಯಿದುಸುಧಾಕಿರಣ
ಮೊಚಂಡಾರ್ಕನುರಿಬಿಸಿಲೊಮದು ಪಳಿಕೋಗಿಲೆಯುಗಿಳಿಮುಖ್ಯಪಕ್ಷಿಗಳ।

ಮಧುರಗಳರವವಿಲಯಗಾಂದಸಾವೀರಭೂತಗಳ ಜೊಬ್ಬೆರವವ್ರೊ ॥ ೨೩ ॥
ಆತಪೋವನದೊಳತಿವೃತ್ತಾಂತದೋರಲ್ಕೆ । ಶ್ರೋತ್ರಪ್ರೋಧನರುಜರ್ಝರಿಸಿತನುಕಂ
ಪಿಸುತೆ । ಭೀತಸ್ತರಾಗಿತಲ್ಲಣಿಸುತ್ತೆತವಕದಿಂದೆಡಬಿಡೆದೆದುಪೊರಳ್ದು ॥
ಕಾತರಿಸುತೆದ್ದುಜಪಸರಯೋಗದಂಡಶ್ರೀ । ಭೂತಿಘುಟಿಕೆಯಕಮಂಡಲವ
ವ್ಯಾಘ್ರಾಸನ । ವ್ರಾತಗಳನುಳಿದುಮುಡಿಗೆದರಿನಿಡುಜಡೆಗಳೆಳೆವೃತ್ತೆಯತಿಭ
ಯವಿಪರಿದೂ ॥ ೨೪ ॥ ದೆಸೆದೆಸೆಗೆವೃಬ್ಬಸದಿಯಳ್ಳೆಗಳಹೊಯ್ವುತ್ತೆ । ಋ
ಷಿಗಣರುನಿಲ್ಲಲೆಡೆಗಾಣದೆವ್ರೋಡುತಿರೆ ॥ ಕುಸುಮಾಸ್ತ್ರನಾಸಮಯದಖಿಳ
ಮೋಹರದೊಡನೆಶಿವನಿಹತಪೋವನವನೂ ॥ ಸಸಿನೆಮುತ್ತುತ್ತಸಪ್ತಕೂಪಾರ
ದುದ್ಘೋಷ । ಮೆಸಗಿಹಿಮಮಂಜುಶಶಿಕಿರಣತಂಬೆಲಕೋಕ । ಶಿಖಿಭ್ರಮರ
ಶುಕನಿಕರಮಧುತರಗಾನಗೀತಂಗಳಿಂಝೇಂಕರಿಸಲೂ ॥ ೨೫ ॥ ಆಸಮಯ
ದಲ್ಲೀಶಪರ್ಣಸಾಲೆಯಸುಖಾ । ವಾಸದೊಳುಗುದವೃಷಣಮಧ್ಯದಿಯೆಡದ
ಮಡವಲೇಸಿನಿಂದಳವಡಿಸಿಬಲದಪದಹಿಮ್ಮಡವದ್ವಜದಾಗಸ್ರಮಡುಗಿಭದ್ರಾ॥
ಆಸನದಿಮಂಡಿಸಿಯೆತನುಮಧ್ಯಸ್ಥಿತಮಾದ । ಆಸಖಿಯಮೂಲಾನಿಲನಕೂಡಿ
ಪಟುಗೈದುಭಾ । ಸುರದನಾಭಿಕಂದದಲಧೋಮುಖದಕುಂಡಲಿಯನೂರ್ಧ್ವ
ಕ್ಕೆನೆಗಹಿ ॥ ೨೬ ॥ ಹೃದಯಸಾರೋಜದ್ವಾದಶದಳಂಗಳವ್ಯಾಲೆ । ಪದವಿ
ಟ್ಟುಚರಿಸುತಿಹಹಂಸನಗತಿಯನಿಲಿಸಿ । ವಿಧುಸೂರ್ಯರೆಡೆಯಾಡುತಿಪ್ಪೀಡ
ಪಿಂಗಳಸುಪಶ್ಚಿಮಮಾರ್ಗವನುತಡೆದೂ ॥ ಮುದದಿ ಚರಣಾಂಗುಷ್ಠವಾರ
ಣಾಗ್ರಪರಿಯಂತ । ಪದುಳದೆಸತ್ರಾಣಗೊಳಿಸಿರ್ಪಪ್ರಾಣವಾ । ಯದನು
ಪಶ್ಚಿಮಮಾರ್ಗದೋಳ್ಮಡಸಿತ್ರಿಕೂಟಸ್ಥಾನದೊಳುನಿಲ್ಲಿಸುತ್ತೇ ॥ ೨೭ ॥
ತನುಮಧ್ಯಮೂಲಚೇತನವಸ್ತುಶಿವಶಕ್ತಿ । ವಿನುತಬೀಜಂಹಕಾರಂಸಕಾರಾ
ಮಳಸ । ತ್ಸ್ರಾಣವಾತ್ಮನಡುನಾಡಿಯಿಂದಲೆಡೆಯಾಡುತ್ತತ್ರಿವೇಣಿಸಂಗಮ
ದೊಳೂ ॥ ಘನಬಿಂದುಂಯುಕ್ತನೆನೆಯದೇವ್ರಚ್ಚರಪ । ಅನಘಹಂಸನಚಲ
ನೆನಿಲಿಸಿನವದ್ವಾರಂಗ । ಳನುಬಲಿದುಬ್ರಹ್ಮರಂಧ್ರದಿಸಪ್ತವಾರಾಸಿಘೋಷ
ದಿಂಮೆರೆವುತಿರ್ಪ್ಪಾ ॥ ೨೮ ॥ ಪರಿಪರಿಯಪಂಚಮಹಾವಾದ್ಯಮಂನಿಲಿಸಿ ।
ಪರಮಪರತರಪರಬ್ರಹ್ಮನಾದದಿಮನಂ । ಬೆರಸಿಬೇರಿಲ್ಲದೆತಪ್ತಕಾಂಚನಪ್ರ
ಭಾಮಯಯಾತ್ಮಜ್ಯೋತಿಯೊಡನೇ ॥ ಸ್ಥಿರಸುಖಜ್ಯೋತಿಯಕೂಡಿಬೆಳಗು
ತ್ತೆ । ಪರವಶಾಬ್ಧಿಯಮುಳುಗಿತಾನೆತಾನಾಗಿಪ್ಪೆ । ನರೆದತಿತಪೋನ್ಯೈಷ್ಠಿಕಾ
ಸ್ಥೆಯಿಂದೊಪ್ಪಿರ್ದನಖಿಳತಪಸಿಗಳೆರೆಯನೂ ॥ ೨೯ ॥ ಬಿಟ್ಟಕೆಂಜೆಡೆಭಸಿತ

ರುದ್ರಾಕ್ಷೆಕುಂಡಲಮ । ನಿಟ್ಟುಸಮ್ಯಾಸನದಿಭದ್ರಮುದ್ರೆಯೊಳ । ವಟ್ಟುಕು ಳ್ಳಿರ್ದುವಳನಟ್ಟಕಂಠಾಲಿಯಲುಗದೆಸಮಗ್ರಗ್ರೀವದೀ ॥ ಬಟ್ಟಹಿಮಘೃಷ್ಟ ತಪ್ಪಿವನೋಸೂರ್ಯಶತಕೋಟಿ । ಘಟ್ಟಿಪ್ರಕಾಶದೊಬ್ಬುಳಿಮೂರ್ತಿಗೊಂ ಡುದೋ।ನೆಟ್ಟನೆರಜತಶೈಲಮೆತಪ್ಪೋಘನರೂಪತಾಳ್ದಿಲ್ಲಿಕುಳ್ಳಿರ್ದೋಲು ॥೨೦॥ ಯಿಾಶನುರೆಕುಮಕಾಲವಧುವಿಧಿವಿಲಯವಿ । ನಾಶನಿರುಪಮನಿತ್ಯನಿಗಮದು ರ್ಲಭನುನಿ । ರ್ನಾಶಹರಿಯುಜರಿಂದ್ರಮುನಿಜನನಮಿತದಿವ್ಯಪಾದನಿರ್ಗುಣವಿ ನೋದಾ ॥ ಪೂಷಶತಕೋಟಿಸಂಕಾಶದೊಬ್ಬುಳಿತೇಜೊ । ರಾಸಿಯಿಂಬೆಳಪ ಸಿತಗಾತ್ರನಿರುತಿಹತಪ್ಪೋವಾಸಮಮ್ಮುತ್ತಿಮುಸುಗಿತ್ತುಮಾರನಬಲಂರವಿಯ ಮುತ್ತುವತನುದೊಲು ॥ ೨೧ ॥ ಮೃಗರಾಜನೆಡೆಗೆಮದಕರಿಯಿರದೆಪ್ಪೋವಂ। ಖಗಪತಿಯಸರಸಕ್ಕೆವುರಗೇಂದ್ರನೈದಿದೊಲು । ಪೊಗೆದ್ವಜನಟಾವಿಂಗೆ ತೃಣಪರ್ವತವುಬರ್ಪಂದದಿಂದೀಪಮುಮನೂ ॥ ಸೊಗಸಿಂದೆನೋಡಿಗವಿ ಸುವಶಲಭನಂದದಲಿ । ಪಗೆಗೊಂಡುಮಾರಸುಕುಮಾರಬಲದೊಡನಗ್ನಿ । ದೃಗನಕೇಳಿಕಲ್ಕೋಪಟೊಪದಿಂಬರುತಿರ್ದನೇನೆಂಬೆನಂಬುಜಾಕ್ಷೀ ॥ ೨೨ ॥ ಕಾಲಭಟರುಂಪ್ರಳಯಕಾಲೋಗ್ರಸಿಂಹಶಾ । ರ್ದೂಲಾದಿದುಷ್ಟಮೃಗಕಾ ಳಾಹಿಸಂಕುಳಂ । ವ್ಯಾಲಿಜಂಝಾನಿಲಂರವಿಕಿರಣಮಳೆಮಂಜುಪ್ಪೋಗಲಳ್ಕಿಹೆ ರೆಸಾರ್ದಿರೇ ॥ ಫಾಲಲೋಚನನಿರ್ಪವಾಸದಮಹಾತ್ಮೆಯಂ । ಪೇಳಲೇನದು ಶಂಕಿಸದೆಗರ್ವದಲಿಪ್ಪೋಗೊಲನತ್ಯಧಟನಿಂ । ಸಕಲಸೈನ್ಯಂಗೂಡಿಮುತ್ತಿದತ ಪ್ಪೋವನವನೂ ॥೨೩॥ ಶಶಿಯುತಿಳಿಜೊನ್ನದಿಂವಿರಹಾಗ್ನಿಪೇರ್ಚುವದು । ವಸ ವಂತನೈತರಲುವನ ಗೊರಡುಚಿಗುರ್ಪವೂಸಸಿನೆಪೆಂಣ್ಕೋಗಿಲಿಯಸುಸ್ವರದ ಗಾನಕ್ಕೆಗುಂಡುಗಳುಕರಗುತಿಹವೂ ॥ ವಸಿದುಮಂಜಂಗರೆಯೆಬೆಟ್ಟಗಳುಜರಿ ದಪವು । ಪಸುರ್ಪತ್ರಮುರುಟುವವುಹಿಮಕೆಯಂಘ್ರಿಪನಿಚಯ । ಕಸಿಗುಂ ದುತಿಶವುತಂಬೆಲರಿಂಗೆಕುಸುಮತತಿಯೆಂತಿವಾರ್ಬಲವಕಳುಹೇ ॥ ೨೪ ॥ ಕೂಗುತಿಹಖಗಭಟರಬೊಬ್ಬೆಯಬ್ಬರದೊಡನೆ।ರಾಗದಿಂಥಳಿಮಂಜುತಂಬೆಲ ರುಶಶಿಚೈತ್ರಪ್ಪೋಗುತವಸಂತರುಂಪರ್ನಸಾಲೆಯುಮುತ್ತಿಕಿತ್ತಿಶರೆಸೂರೆಗೈದೂ ಭೋಗಿಭೂಷನತಪ್ಪೋಮಂಟಪವನಿರದೆಕಿರು । ಬಾಗಿಲಿಯತೆಗೆದುವಳಪ್ಪೊ ಕ್ಕೊಕ್ಕಲಿಕ್ಕಿಶಿವ । ಯೋಗಮೌನದಮುದ್ರೆಬಂಧಂಗಳಮ್ಮುಗಿದನಾಳಗಳಲಿ ಸುಳಿದೂ ॥ ೨೫ ॥ ಅವಿರಳಪರಬ್ರಹ್ಮನಾದದೋಳ್ಮನಮುಳುಗಿ। ಸವಿಯುದಾ ನಂದಾಬ್ಧಿಮಧ್ಯದೋಳುನಿತ್ಯಸುಖಿ॥ ಸವಿರಸಮುಸವಿದುನಿಶ್ಚಲಿತಪರಶಿವನುಗ್ರತ

ಪ್ರೋವಿಘ್ನೈಗೈಯ್ಯಾ॥ನೆವದಿಯೂರಡಿಕೋರಗಿಳಿವಧುರನುಡಿಗಾನ।ನವರಸಂಕ
ರ್ಣರಂಘ್ರದಿಪ್ರೊಕ್ಕುಹೃತ್ಸರಸಿ । ತವೆತುಂಬಿತತ್ಕಮಲವರಳಿತನ್ಮಧ್ಯನಿಶ್ಚಲನೆ
ಯಿಂಧಿರ್ಪಹಂಸಾ ॥ ೩೬ ॥ ಮೆಲ್ಲನೆಳ್ಚತ್ತುತದ್ದಳಗಳೊಳುಸಂಚರಿಸ । ಲಲ್ಲಿ
ಹಮನೊಭ್ರಮರಸದ್ವಾಸನೆಯನೆನೆಯೆ । ಪ್ಫುಲ್ಲಶರಹರನಬಯಲಂಗಮಯ್ಯ
ನಂಗನಬಯಲಬಂದುಮುತ್ತೀ ॥ ತಲ್ಲಣಂಗೊಳಿಸುರೆದೇಹಮಂಯಿಾಶತಂ। ನ
ಲ್ಲಿತಾನೆನದನಿದೆತ್ತಣುತ್ಪಾತವಾ । ರಲ್ಲಿಸಂಜನಿಸಿತೊಯೆಂದೆಣಿಸುವನಿತರೊಳು
ವಾರತಾಂಬರುತಿರ್ದನೂ ॥ ೩೭ । ಕಾಮಂಗೆಜನನಿಜನಕರನುಕಲ್ಪಿಸಲೇ
ಕೆ। ಕಾಮಿಸುತ್ತಿಹರಮನದಿಂಜನಿಸಿಸರ್ವರನು।ಕಾಮುಕರಗೈದುಕಳವಳಗೊ
ಳಿಪನವನೆಸ್ವತಂತ್ರಪುರುಷಂಜಗದೊಳೂ ॥ ಕಾಮಿನಿಯರೆಂಬಕಟಕಿಯುಮ
ರೆಯೊಳಿರ್ದುತಾಂ । ಕಾಮಿಪರಚಿತ್ತಭವನೆನಿಪನಲ್ಲದೆವೋಹ। ಕಾಮಪರಶಿವ
ನನೆನಹಿಂದೊಗೆದವಿಶ್ವಪ್ರಪಂಕಾಮಾಧೀನವೂ ॥ ೩೮ ॥ ಹರಹರಿಯುಬ್ರ
ಹ್ಮೇಂದ್ರವರಸಿದ್ಧಸಾಧಕರೆ । ನೆರೆಜಪತಪೊಯತಿವ್ರತಿಜಿತೇಂದ್ರಾದಿನಿ। ಷ್ಯ
ರನಸುರನರನಾಗಖಗಮೃಗಂಕೀಟಮುಖ್ಯಖಿಳಜೀವಾತ್ಮರುಗಳಾ ॥ ನಿರತದಿಂ
ದವರಮನಭಾವಕರಣಂಗ ಳೊಳುಸ್ಥಿರದಿನೆಲಸಿರ್ದುತನ್ನೆನಹುಮಾತ್ರದಿವೋ
ಹ।ಸರಳಿಂದಲೆಚ್ಚೆರ್ದೆಗೆಡಿಸಿಭಂಗಂಬಡಿಪಸರ್ವರಸುಚಿತ್ತಭವನೂ ॥ ೩೯ ॥
ಯಿಂತಪ್ಪಯುಸಮನಸುಳಿತಮಹಾಬಲಯುತ । ತ್ಯಾಂತಲೋಕೈಕವೀರಂವಿಜ
ಯೆಪಂಚಮಲ। ತಾಂತಬಾಣಂಗಳಿಂನೆಚ್ಚುಯತಿಘಾಯಗಾಣಿಸದೆನೋಯಿಪ
ಸರ್ವರಾ ॥ ಕಂತುವೆಯುಸಮಶರನವನಿದಿರೊಳ್ಳೈದೆಮಾ । ರಾಂತುಕಾದುವವೀ
ರರಾರೆಂದುಬಿರುದಿನೊಜ । ರಂತೆಮಕರಧ್ವಜೆವಪಿಡಿದಂಚೆಕೊಂಳೆನವಿಲ್ಲಾಳಿಗ
ಳುಸಾರುತಿರಲೂ ॥ ೪೦ ॥ ಅಳಿಮೌರ್ವಿಯಿಕ್ಷುಚಾಪಂಚಲಗೋರ್ಣಲು । ಗಿಳಿ
ಗುದುರೆಚೂತರಥಚಂದ್ರಮಂಡಲಚತ್ರ । ಪ್ರೊಳೆವಮುಚ್ಛಧ್ವಜಂತಳಿರಮಳೆಮ
ಕರತೋರಣಗಳಂಪಿಡಿಸೆವಲವಿಂ ॥ ಕಲಿವೀರಯಾವೇಶರಸಮ್ಯೆಯ್ಯೊಳಾವರಿಸೆ
ಅಳಕದೆವಸಂತಚೈತ್ರಂಮಂತ್ರಿಗಳನುತಂ। ಬೆಲರುಹಿಮಕರಮುಖ್ಯಸ್ವಾಮಂತ
ರೊಡವರಲುಭ್ರಮರತತಿಕೈವಾರಿಸೇ ॥ ೪೧ ॥ ಭರದಿಶಂಕರಮಾಳ್ಪವುಗ್ರತಪ
ಕೆಡಿಪೆನಂ। ದುರವಣಿಸಿಭೋರನೈತರ್ಪಸುಮಶರನಯುತಿ । ವರವೀರಶೌರ್ಯಪ್ರ
ತಾಪಮಂದೂರದಿಂದೀಕ್ಷಿಸುತೆಕಡೆವಾಗಿಲೊಳ್ ॥ ಯಿರುತಿರ್ಪಸ್ಮರಕಾಲ
ವಿಧಿಯುವಧಿಗಳಿರದಿ । ಚರಣಚತುಷ್ಟಯಿಂಮೆಟ್ಟಿಬಿನದಿಪನತುಳಪರಮ
ನಿಸ್ಪ್ರಹವೃಷಭರಾಜೇಂದ್ರನೋಡೆನೊಡಿಶಂಖಿಸದೆಬಹುತಲಿರ್ಪಾ ॥ ೪೨ ॥

ಮಾರಂನೃಪಾಲಕನನೋಡಿನಂದೀಶಯಿವ। ನಾರೋವಿಾಪುರುಷನಿಂದಾದುದತಿ
ಳುತ್ಪಾತ। ನಾರಾಯಣನುಮಾಗೆಗರುಡಪಾಳಿಯುಯಿಲ್ಲಮಜನೆನಲುಹಂಸಧ್ವ
ಜವ್ರು॥ತೋರದಿದೆಸುರನಾಥನಾದೊಡಂಶ್ವೇತಕರ್ಯೇರಿಬಹನವನಲ್ಲರಘುಸಕೇ
ತುಪಕ್ಷಿಪರಿ । ವಾರದೊಡನ್ಯೆತರ್ಪಮೂಲೋಕವೋಹನಶರೀರಕಾಮನು
ಯಿಾಶನಾ ॥ ೪೩ ॥ ಪರತರದತಪವಕೆಡಿಸುವೆನೆಂದುಬರ್ಪನವ । ನಿರಿ
ದುಕೆಡಹುವೆನೆನುತಕೋಪಾಗ್ನಿವಡಲೊಳಂ । ಯಿರದೆಹೊತ್ತುತ್ತಹೊನಲೀ
ರಿಭುಗಿಭುಗಿಸುತ್ತೆ ಪೊಗೆಸೂಸೆನಾಸಿಕದೊಳೂ ॥ ವುರಿಯುಮುಕ್ಕುಳಿಸು
ತ್ತೆನೇತ್ರಯುಗಳಂಗಳಲಿ । ಕರೆವುತ್ತೆಕೆಂಗಿಡಿಗಳಂನೆಡ್ಡುಚರದಿಂ । ಧರೆಯು
ಗೆದರುತ್ತೆಬಾಲಮುಮಿಡಿದುಭಯಕರ್ಣಂಗಳಂನಿಮಿರ್ಚಿನೆಲನಾ ॥ ೪೪ ॥
ವಡನೆಘ್ರಾಣಿಸುತಡುರುಕಿಡಲಜಾಂಡದಘಟಂ । ನಡುಗಿತ್ತುಪೊಡವಿನಗ್ಗಿದುದು
ಯುಹಿಪತಿಸಹಸ್ರ । ಪೆಡೆಗಳಂಕುಸಿಯೆಕೂರ್ಮನಬೆನ್ನುಬಿರಿವೋಲಾಯುಷ್ಟ
ಕುಲಶೈಲಂಗಳ॥ ಗಡಗಡನೆವುರುಳಿದವುಸಪ್ತಸಾಗರಮಿರದೆ । ಸಿಡಿಮಿಡಿಯೊ
ಬ್ಬುಳಿಯುವಾಗಿಪರಿಯಲ್ಸ್ಮರನ। ಪಡೆಚೆದರ್ದುಗಗನಪಥಮಡರ್ದುಗಮನಿಸಿ
ಮಾರಥನುಬಾಣಬತ್ತಳಿಕೆಯಾ ॥ ೪೫ ॥ ಬಿಸುಟುಯದೆತಲ್ಲಣಗೊಂಡುಹೃದ
ಯುಕಂ। ಪಿಸುತಲೋರ್ವನಿಂದುಕಂಗೆಟ್ಟುನೋಡುತಿರೆ। ವೃಷಭಕೆಕ್ಕರಿಸಿಕ
ತ್ತಮಕೊಡಹಿಶೃಂಗಗಳಸಾರ್ಚಿಶಳಿವೆನೆನುತೇ ॥ ಬಿಸಿಗೋಪದಿಂದಲುರವಣಿ
ಸಿಬರುತಿರಲಿರದೆ । ಕುಸುಮಾಸ್ತ್ರನೆರ್ದೆಗೆಟ್ಟೋಡಿವೃಕ್ಷಮನಡರೆ । ಶಸಿವದ
ನೆಗಿರಿಜಾತೆಯಿಾಕ್ಷಿಸುತಲಿವನಿಂದಲೀಶನತ್ಯುಗ್ರತಪವಾ ॥ ೪೬ ॥ ವುಳಿದು
ತನ್ನಕಂಡಮಾತ್ರವೊಲಿದಪನೆನುತ । ಘಳಿಲನೆನಂದೀಶನೆಡೆಗೈದಿಶ್ರೀಹಸ್ತನ
ಳಿನಂಗಳನುಮುಕುಳಿಸಿನಿಂದುಯಾ ದ್ವಾಂತತಿಳುಪಿಕೋಪಮುಮಾಣಿಸೀ ॥
ಅಲರವಿಸಿಖಂಗೆಯಭಯಮನಿತ್ತುನೀಬಂದ। ಅಲಘುಕಜ್ಜಮತೀರ್ಚಿಪುದೆಂದು
ಬೋಧಿಸಲು । ಗೆಲುವಿನಿಂಮಾರತನ್ನಯಸಕಲಸೈನ್ಯಮಂಗೂಡಿಸಾರಪುನು
ಸಾರ್ದು ॥೪೭॥ ಮ್ಯೆಗರೆದುಕುಳಿತಿಕ್ಷುವಿಸಿಖಾಸನಕ್ಕೆಯುಳಿ । ಯೌಘಮೌ
ರ್ವಿಯುವುಭಯಕೋಪಿಂಗೆಯುಳವಡಿಸಿ । ರಾಗದಿಂಟಂಕಾರಗೈಯ್ಯೆದಶವಿಶಿಬಿ
ಸುಗೆಬಿಟ್ಟಿತ್ತುತನ್ನಾದದೀ ॥ ಶ್ರೀಗಿರೀಶನಹೃದಂಯಬುಗಿಲಿಡಿದುತನುಕಂಪ ।
ನಾಗಿಜಾಘರಿಸಿತಲ್ಲಣಗೊಳುತಿರಲೊಡನೆ । ಬ್ಯಾಗವಿಂಕಮಲಕುಮುದಂಮಲ್ಲಿ
ಗೆಯುಚೂತಶೋಕೆತಳಿಕುಸುಮಂಗಳಾ ॥೪೮॥ ಪಂಚಲಪನನಪಂಚಮನ
ಯುವಂಗಳಿಗೆಸುರಿ । ಸಂಚುತಪ್ಪದತೆರದಿಲಕ್ಷ್ಮಿಯೆತನ್ನಯು । ಪಂಚವಿಶಿಖಂ

ಗಳನುಸರ್ವಶಕ್ತಿಯಬಲದಿಯಚ್ಚೆಚ್ಚು ಬೊಬ್ಬಿರಿಯಲೂ ॥ ಪಂಚವರ್ನಸ್ವ ರೂಪಕನಸರ್ವಾಂಗಗಳ|ವಂಚನಿಲ್ಲದೆತಾಗಿತಟ್ಟೂರ್ಚೆವಿರಹಾಗ್ನಿ|ಮುಂಚೆಮ ಯ್ಯಾವರಿಸಲತಿಕೋಪದಿಂದಮುನಿದನಲಂಬಕತೆರೆಯಲೂ ॥೪೯॥ ಭುಗಿಭು ಗಿಸಿಪೊಗೆವೆರಶಿಕಿಡಿಯೊಡೆದುಡಳ್ಳುರಿಯು| ಮಿಗೆಪೇರ್ಚಿಪಬುರ್ಬುತ್ತೆಬಳ್ಳಿವರಿದೇ ಳುನಾ | ಲಿಗೆಸಾರ್ಚಿಥಗಥಗಿಲ್ಸಿಳಿಸಿಳಿಲ್ಕಿನದವಿಂಕಿಚ್ಚಿದಲೋಕವಾ ॥ ಪೊಗೆ ಮಿಗೆಯಕಾಮಾಗ್ನಿಯಿಂದದಹಿಸುತಲಿರ್ಪ | ವಿಗಡಮಾರನಧನುಬಾರ್ಣಬತ್ತ ಳಿಕೆಧ್ವಜ | ನೆಗಹಿದಸುಛತ್ರಮಂಮಕರತೋರಣಮುಖ್ಯಮಂಮುಸುರಿಸು ತ್ತಿೀ ॥೫೦॥ ಸುಳಿಸುಳಿದುತುಲಾದಾಶಿಯಸುಡುವಜ್ವಾಲೆಯೊಳು | ನಳಿನಾ ಸ್ತ್ರನಮಳತರಕಳೇವರವನಿಮುಷಾರ್ಧ | ದೊಳುಚಿತ್ರಪಟವದಹಿಪಂತೆದಹ ನಂಗೊಳಿಶಿಭಸ್ಮೀಕೃತಂಗೆಯ್ಯಲೂ ॥ ಬಳಿಸಂದದಂಡೊಡೆದುಚಂದವರಿಯ ಲುಮಂದಾ| ನಿಲನಂಪರಿದ್ಯೆದಿಕುಸುಮಾವತಿಯಪಿರಿಯಕೊ | ತ್ತಳವಡರಿಪತಿ ಪೋದಮಾರ್ಗಮಂನೋಡುತಿಹರತಿಯೊಡನೆಸೂಚಿಸಲ್ಕೀ ॥೫೧॥ ಅವಳೆರಡು ಕರ್ನರಂಧ್ರದಿತಪ್ತಸರಲು ಯುಗಳಸೂರ್ಚಿದಂತೆಕಾಮಾಗ್ನಿದುಃಖಾಗ್ನಿತಾಂ ತವೆಪೇರ್ಚಿವಡಲೊಳಂಪುರಿದುದುಸರ್ವಾಂಗವಾವರಿಸಿಸಿಡಿಮಿಡಿಯೊಳೂ ॥ ನ ವಕದಳಿಮೂಲಮಂಭೇದಿಸಲುಕೆಡೆವಂತೆ | ಮವನಿಯೊಳುದೊಪ್ಪನೆಕೆಡೆದುಪ ರವಶದಿಯು | ದಕವನಗಲ್ದಮುಪ್ಪನಂಪದಲಿಸಿಡಿಸಿಡಿಮಬೀಳ್ದುಪೊರಳ್ದುಮಿಡು ಮಿಡುಕುತಾ ॥೫೨॥ ತ್ರಿಣಯನುರೆಹಣೆಗಿಚ್ಚಿನಿಂಜೆಂದನಾಪುಷ್ಪಗೆಣೆಯಂ ಗೆವಂದೆನಿಮುಷಂದುಃಖಿಯೊರತಿ | ವನಿತೆಯಳಿಗಾವರಿಶಿದತುಳದುಃಖಾನಲನು ಕೊಲ್ಲದೆಜೀವದೊಡನೇ ॥ ಘನತಾಪದಿಂದಲಿಸಾಯಲಿಗೊಡದೆಬೇಯಿಸುತಿರೆನೆ ನನೆನದುಯವೆಬಸುರಹೊಯ್ಕೊಳುತಚೀರ್ದುದೋ | ದನೆಯಿಂದೆಶೋಕಾಬ್ಧಿ ಯೊಳುಮುಳುಗಿಕಂಬನಿಗಳಂತೋಯ್ದುಭೋರ್ಗರೆವುತಾ॥೫೩॥ ಶರೆಬಿಗಿದು ಕಂಠಗದ್ಗದಿಪಗರ್ಜನೆಯಿಂದೆ | ಯಿರದೆನುಡಿಯೊಡೆದುಮುಂಗುರುಳ್ಮೀಘನ್ಮೈ ಬೆಬಂದುರವದನವಿಂಧುಮಂಡಲಮು ಸುಕಲ್ಕೋಮಲಾಂಗದುರೆಮಿಂಚಿನಿಂ ದೇಮೆರೆವಪುಬುರ್ಬ್ಬರದಯಿಂದ್ರಚಾಪದಿಯಕ್ಷಿ | ಗರೆವದುಖಾಕೃಪೇರ್ಮಳೆ ಯಿಂದತೊಪ್ಪನೆತರುಣಿತಾಂತೊಯ್ದು ಸತಿವಿರಹದಿಂಹುಡಿಯೊಳುರುಳ್ದುಪೊರ ಳ್ದುರೊದಿಸುತ್ತೀ ॥೫೪॥ ಕನಕಕೋಮಲಲತಾಂಗಮದ್ಪೊಳದೋಳ್ಪೊರಳಿ ವಿನುತಕಲಶೋರೋಜಗಳನೆಲುದಂತೊಲಗಿ | ಘನಕಬರಿಸಡಿಲಿಕೇಶಂಸೂ ಸಿಮೈಮುಸುಗಿಯಕೆಯುಗಿದಮುಕ್ಷಿದ್ವಯದೀ ॥ ತನುತಾಪವೆಗ್ಗಳಿಸಿಬಿಸು

ಯಿಲ್ಕುರೆವುತ್ತ । ತನತನಗೆಕರಚರ್ರಣಸೊಪ್ಪಸಿವ್ಯಮರೆಬ್ಬು। ವನಿತೆಪತ್ತಿವಿರಹ ಸಂತಾಪದಿಂಕಡೆಯವಸ್ಥೆಯೊದಗೆಮರದೋರಗೆಲೊಡನೇ ॥ ೫ ॥ ಕಳಾವಿಳಾ ಸಿ ಏವೆಣ್ಗಳುಕಂಡುಕಂಗೆಟ್ಟು । ಬಳಿಸಂದುಕರದಬೆರಳ್ಗಳನಬಿಕೆಮುರುಕೊಳುತ । ಘಳಿಳನೆತಂಗೊಳಲತೀರದೊಳ್ತಳಿತಮಲವಾಮರನನೆರಳಿನಲ್ಲೀ ॥ ಮಳಲವೇದಿಕೆಗೈದುಯಳೆವಾಳೆಪರ್ನಮಂ। ನಲವಿಂದೆಪಾಸಿಪೊಸಜಾಜಿಕುಸುಮವಪರಪಿ । ಕಳಹಂಸಗಮನೆಯರುಕೊಂಡೊಯ್ದುಮೆಲ್ಲನೆಮಲಗಿಸುತಹಿಮಚೋರ್ನಮಂ ॥೫೬॥ ಯದೆಯೊಳಂಪರಪಿಧೂಂಮ್ರಾಂಬರವವದ್ದಿಗೈ । ದದನುಬಾಸಣಿಪಿಲಾಮಂಚದುರೆ ಯಾಲಿವಾಟದಸಣ್ಣಘಾಳಿಯಂಯಿಕ್ಕೆಲದಿಯಳೆವೆಣ್ಣುಗಳ್ಕಿಂದುಬೀಸುತ್ತಲೀ ॥ ವದಗಿಬಹುಶೈತ್ಯೋಪಚಾರಮಂಗೈವುತಿರೆ । ಸುದತಿತನುಸಂತಾಪದುರಿಪೇರ್ಚಿಮಲಗಪಾಸಿದತಳಿರುಮುರುಟಿತರಗಾಗಿ ಜಾಜಿಯಕುಸುಮಸೂಜಿಗಳಸೂರ್ಚಿದಂತೇ ॥ ೫೭ ॥ ಕೂರಸರಲುಗಳಾಗಿ ವ್ಯೆಯ್ಯೊಳಳ್ಕುರಿಯಿಕ । ಪೂರ್ರಚೂರ್ನದಕಂಪುವಿರಹಜ್ವಾಲೆಯಪೆಂಪು । ನಾರಿಯರುಬೀಸುತಿಹಬಿಜ್ಜಣಿಯತಂಗಾಳಿಮದನಮೋಹನದಗಾಳೀ ॥ ಕೀರಗಳಮಧುರನುಡಿಕರ್ನಗಳಗುರಿಯಹಾಡಿ । ಆರಡಿಗಣದಸದ್ದುಮೂರ್ಛೆಗೊಳಿಸುವಮುಥು। ಸಾರಕೋಗಿಲೆಯಸ್ವರಕರಗಿಸುವಕಾಮಜ್ವರದಿಂದೆಸಂತಾಪಿಸುತಿರೇ ॥ ೫೮ ॥ ಲಲನೆಯರುತಮತಮಗೆಯದೆಗುಂವಿಚಿಂತಿಸುತ । ಘಳಿಲನೇ ಪಿಡಿದೊಯ್ದುತಂಗೊಳಲಿನಿಂದುರ್ಕಿ । ಛಳಿರ್ಗಲ್ಲಕಾಲುವೆಯೊಳಂ ಪರಿವಶೀತಳೋದಕದಿಕಾಲ್ಗಳನೆರಡನೂ ॥ ಯಿಳುಹಿಯದ್ದಲ್ಕೆಕಾಚೋನ್ನತಿಳಿಗಾಸುತ್ತೆ । ಜಲದೊಳೆದ್ದುವತೆರದಿಚೂಯಿಚರಿಂದೆನುತೆ । ಬಲುಗಾಯ್ದತಜ್ಜಲಂ ಯಳವಾಳೆಗವರಿಸಲವುವಣಗಿತರಗಾಗಲೂ ॥ ೫೯ ॥ ಮೃಗಮದಸುಗಂಧಗಂಧಿನಿಕೇಳುಯಾತರುಣ । ಮೃಗಯಾಯಮಾನಲೋಚನೆಯನಾರಿಯರು । ಬಗೆಬಗೆಯಶೈತ್ಯೋಪಚಾರಂಗಳಿಂದಲುಪಚರಿಸುತ್ತೆಮೂರ್ಛೆತಿಳುಹೀ॥ ಮಿಗೆನಳಿನದಳದದೊನ್ನೆಯೊಳುಶಾಂತೋದಕವ । ಮೊಗದುಪಾನಂಗೈಸಿ ಮಡಿಸಿದೊಡೆಮುಗಿದದೃಗ । ಯುಗಳಮಂಮೆಲ್ಲನೆತೆರದುಯೀಕ್ಷಿಸುತೆದ್ದು ಕುಳಿತುಯಾಳಿಯರನುಡಿಸೀ ॥ ೬೦ ॥ ಶ್ರೀಫಲಪಯೋಧರೆಯರುಗಳಮಿಗೆಮನ್ನಿಸುತೆ । ಆಪತ್ತಿಗರುನಿಮಗಿಂದಹಿತವರಕಾಣೆ । ತಾಪಮಂತವಿಸಿದಿರಿ ಯನ್ನಪ್ರಾಣೋಪನಂತೋರಿಬದುಕಿಸುವದೆನಲೂ ॥ ಆಪೆಣ್ಣುಗಳಿಗೆಹೆಗ್ಗಡತಿಯುಹಸುಗುಣೇಕ್ಷು । ಚಾಪನಂಗನೆಗೆವಾರ್ನುಡಿದಳಂಘೇರಿರವ । ಕಾಹಿಯುರಿಯದೆ

ದುರ್ಗತಲ್ಲಣಿಸಿತೆಂಬಂತೆಗಾಳಿಯವಾರ್ತೆಗಿಂತಪ್ಪರೇ ॥೬೧॥ ಯೇನಾಗದದು ಮಾಡೊಡೆಯುಧೈರ್ಯ್ಯಸರ್ವಥಾ । ನೂನಸಾಧನಮಕ್ಕುಸಟೆದಿಟಮನೆಲ್ಲವ ಪ್ರಮಾಣಿಸಿಯೆ । ತಿಳಿದುನಿಶ್ಚೈಸಬಹುದುಬರಿಯದೆಬಯಲಬಳಲಿಕೆಗೊಂಬರೇ ಮೆನಾತ್ಮಜಾನಾಥಕೋಪಿಸಲುಕೊಲ್ಲುವನು । ತಾನುವಲಿದಡೆಕಾಯ್ವನಾವು ಪ್ರೀಗೀಕ್ಷಿಸುವ । ವಿಾನಾಂಕನಿರ್ದೋಡಲೇಸುಯಿಲ್ಲದೊಡೀಶನಂವಲಿಸಿ ದೊಡೆಯಿತ್ತಪಾ ॥ ೬೨ ॥ ಯಿದಕಿನಿತುಸಂಶಯಬೇಡೆಂದೊಡಂಬಡಿಸುತ್ತೆ । ಕೆದರ್ದಕುಂತಳಮಮುಡಿಗೊಳಿಸಿವೈಥಾಳಮಂ । ಮುದದಿಂದತೊಡದುಸಡಿಲ್ಪಡಿಗೆಯಂಬಿಗಿದುಡಿಸಿಮೇಲುದಂಪೋದಿಸಿಸರ್ವಾ॥ ಸುದತಿಯರವಡಗೂಡಿ ರತಿಯುತತ್ಕಾಂತನೈ । ದಿದಸರಣಿವಿಡಿದುಯತಿದುಃಖದಿಂಕಂಬನಿಯ । ತುದಿಯುಚಳ್ಳುಗುರಿನಿಂಚಿಮ್ಮುತ್ತೆಮನದಿಪ್ರಳಾಪಿಸುತೆಬರುತಿರ್ದಳೊ ॥ ೬೩ ॥ ಯಿದುವೆಬಾಣಾಖ್ಯ ಸಾಯೂಜಪ್ರಬಂಧಮ । ತ್ತಿದುವೆ ನವಮೋಹನತರಂಗಿಣಿಯುಭಿದಾನ । ಯಿದನುಶ್ರೀಕೋಳೂರ ರಾಮೇಶನುಡಿಸಿದೊಡೆಪೇಳ್ದಶಂಕಠನುವಲಿದಾ ॥ ಯಿದನುಸರಸೋಕ್ತಿಯಿಂಬರದೋದಿಪೇಳ್ಕೇಳ್ವ । ಸದುಹೃದಯರಾದ ಸತ್ಪುರುಷರಿಗೆಸಂತಸದಿ । ಕುಧರಜಾರ್ಧಾಂಗಸೌಭಾಗ್ಯಸಂಪದಸೌಖ್ಯವಿತ್ತು ರಕ್ಷಿಸುವಬಿಡದೇ ॥ ೬೪ ॥

॥ ಅಂತು ಸಂಧಿ ೬ ಕ್ಕಂ ಪದನು ೨೩೧ ಕ್ಕಂ ಮಂಗಳಮಹ ॥

॥ ಶ್ರೀ ಶ್ರೀ ಶ್ರೀ ॥

ಶ್ರೀಗುರು ಬಸವಲಿಂಗಾಯನಮಃ

—)*(—

ರತಿಪ್ರಳಾಪ.

॥ ಪಲ್ಲವಿ. ॥

ರತಿಪ್ರಳಾಪಿಸುತಿರಲುಗಿರಿಸುತೆಯುಕರದೊಯ್ದು । ಸಿತಕಂಠಗೆರಗಿ ಸಲುವರಕೆಯತ್ತಂಕಳುಹೆ।ಪತಿಯುಬೆದಕುತ್ತದುಸ್ತಾರಕಾನನದಿಬರುತಿರ್ದಳ ತ್ರಿಜಾನಾತ್ಮಜೆ ॥ ಪದಾ॥ ತರುಣಿಯುಣುಗನಸುತನತಮ್ಮನನುಜನಸತಿಯು। ಪಿರಿಯನುಯ್ಯನಬೀಗನವನವೊಮ್ಮಗನವ್ವೆ । ವರಪಿತನಯುಪತಾರನಾಗ್ರಜನ ಯಂಗನೆಯುತಸ್ಕರನುಬಲುಪಿನಿಂದೆ॥ ಯಿರದೆರವಿುಸಿದಳಶಾಪವಕಳೆದೆನಪ್ಪನಾ। ವರವಾಹನವಧರಿಸಿದನಯುರೆಶರೀರದಿಂ । ನೆರೆವಿರಾಜಿಪಮಕುಟಮೌಳಿವೃಷ ಪಾಳಕೃಪಾಳಿರಾಮೇಶಸಲಹಾಹಿ॥ ೧ ॥ ಮೂಷಕತುರಗಮುವನೇರಿಕುಣಿಸುತ್ತಬರ । ಲಾಷಡಾನನನವಿಲ್ಗುದಿರೆಯೇರಿದಿರ್ವರಲು । ಯಾಶಿಖಿಗೆಯುಳ್ಕಿಗಣವನಕುಕ್ಷಿಬಂದಾಹಿಮುಡಿಯುಳಿದುಪರಿಯೆಬೆದರ್ದೊ ॥ ವಾಸರಿಸಿಲಂಬೋದರನಕೆಡಹಿಯಿಲಿಯೊಡೆ । ಬಾಸುರದಗಜವದನಪ್ರೊಡೆಗೆಡದುಪ್ರೊರಳುತಿರೆ । ಶೇಷನಂಪಿಡಿದುಪ್ರೊಟ್ಟೆಯಕಟ್ಟೆಯೆತ್ತಿಮುದ್ದಿಸಿದಗಿರಿಜಾತೆಸಲಹಾ ॥ ೨ ॥ ಯೆನ್ನವದನಾಬ್ಜವಿಕಸನಗೈವಭಾಸ್ಕರನೆ । ಯೆನ್ನಹೃದ್ವನಮಕೋನರಿಪವಿಮಳವಚೈತ್ರ । ಯೆನ್ನಯವ್ವನಸರೋವರದಿಕ್ರೀಡಿಪಪರಮಹಂಸಯೆನ್ನಯಕೋಮಲಾ ॥ ಸನ್ನುತಾಂಗದತಳ್ಪದೋಳ್ಸುಖಿಸಮತ್ಕಾಂತ । ಚನ್ನಾಗಿ ಶಾರದಸುಚಂದ್ರನುಸುಧಾಕಿರಣ । ವನ್ನುಸುರಿಸಲ್ಸೊಂಪುದೋರ್ವಂತೆ ಸೊಬಗುಳ್ಳಮೇಲ್ಗಧೆಯುಸೇಳಾಲಿಪೇ ॥ ೩ ॥ ಅರೆವಿರಿದಕಮಲಗಳನಾರೈದುಭ್ರಮರಾಳಿ । ಪದುಷದಿಂತದ್ರಸವಸವಿದುಮಧುವಿಡಿವಂತೆ । ಸುರಚಿರದಸತ್ಕೃಥೆ

ಯಸುಧಾರಸಮನೆಲ್ಲವ್ರೊಬ್ಬುಳಿಸಿಯೀಕೃತಿಯಕೇಳೇ ‖ ವರಕ್ಷೀರಶರನಿಧಿಯ ಸಂಭವನಸಂಪೂರ್ಣ ನೆರೆಪೋಲ್ವಬಟ್ಟಬೆಳ್ದೊಗಡಭಾಮಿನಿರನ್ನೆ । ನಿರುತ ದಿಂಕೇಳುಮನ್ಮಥಮಂಗಳರಾಶಿಸಕಳಸತ್ಕಳಾವಿಲಾಸೀ ‖ ೪ ‖ ಗಂಧಸಿಂಧೂರ ಯಾನೆಯೆವೊಲಿಮಯವಧರಿಸು । ಕಂದರ್ಪನಂಗನೆಯುಪತಿಶೋಕದಿನ್ನಾರ। ಸಂದೋಹದೊಡನೆಪ್ರಳಾಪಿಸುತನಡೆಯಡಿಗಳಿಂದಬರವರಲಾಗಳೂ ‖ ಯಿಂ ದುಮೌಳಿಯಫಾಲನಯನಾಗ್ನಿಜ್ವಾಲೆಯಿಂ । ಬೆಂದುಬಯಲಾದವಾರ್ತೆಪೇ ಳಿಪಾದಾರ । ವಿಂದದೊಳ್ದೊರಳ್ವಭೃಂಗಾಳಿಯನೆ । ಬಿಡುಮುಡಿಯನಿಡುಗೇ ಶಮಡಮುಸುಗಲೂ ‖ ೫ ‖ ಬಿಡುಮುಡಿಯಬಂಧಿಸದೆ ಮೇಲುದನುಪೊದೆಯ ದೆ । ಸಡಿಲ್ದುಡಿಗೆಸೈಲಿಸದೆಯದೆಬಡಿಯಮುಚ್ಚದೆ । ಜಡಿವಹಾರಾವಲಯಗಳ ತೊಡಂಕತಪ್ಪಿಸದೆಕಡುಲಜ್ಜೆಕಂಕ್ಷೆದಪ್ಪೀ ‖ ವಡನೆದುಃಖಾನಲನುವಡಲನಾವರಿ ಸೆತಾಂ । ನಡೆಗೆಟ್ಟುಸುಯ್ಯುತಾಚೇತನದಿಸೊರಗಿಬಾಯ್ತುಡಿಯಾರಿಹವೈತ್ರ ಸಿತತ್ತರಿಸಿತಲ್ಲಣಿಸಿಸೊಪ್ಪಡಸಿಕೆಡೆಯಲೊಡನೇ ‖ ೬ ‖ ಕಳವಿಳಾಸಿನಿಯರ ತಿತವಕದಿಂಕಂಗೆಟ್ಟು । ಘಳಿಲನೆಪಿಡಿದೆತ್ತಿಕುಳ್ಳಿರಿಸಿತಮ್ಮತೊಡೆ । ತಲೆಗಿಂ ಬನಿತ್ತುನೆಲಳ್ಗೊಳಿಸುತ್ತೆನಿಂದುಕಣ್ಮುಚ್ಚಿಫಾಳಿಯಬೀಸುತೇ ‖ ವ್ರೊಳಿದು ಶೀತಳಜಲಮನೀಂಟಿಸುತೆವುಪಚರಿಸಿ।ಲಲನೆಯರುಮೆಲ್ಲನೆನುಡಿಸುತ್ತಲತಿಮೂ ರ್ಛೆತಿಳಿಪುತ್ತೆಪಿಡಿದೆತ್ತಲಿದ್ದು ಕೆಲಬಲದಕೆಳದಿಯರಪೆಗಲೊಳ್ದೊತ್ತೀಳ್ಗಳಾ ‖ ಪೇರಿಪೆಂಬಲಿಸುತ್ತೆಮತ್ಸುರುಷನಳಿದೆಡೆಯು। ತೋರಿರೆಂದನುತತವಕಿಸುತಮೆ ಲ್ಲಡಿಯಿಡುತನಾರಿಜನಂಬೆರಸಿಪ್ರೋಕುತತಪ್ರೋಗುವನದಕುಂಬನಿಂಬಿರೆಬೆಳಗು ವಾ‖ ತೋರಚಿತಭಸಿತದೊಟ್ಟಲನೋಡಿಬಂಧುರದ। ತಾರಾದ್ರಿಕಿರುಮೊರಡಿರಾ ಜಿಸುವವೊಪ್ಪವೋ । ಕ್ಷೀರಾಬ್ಧಿಪಾಲ್ದೆರಯಚೂರ್ಣದೊಬ್ಬುಳಿಯೋಪರಮೈ ಶ್ವರ್ಯತೇಜನಿಧಿಯೋ‖೭‖ವರಯತ್ರಿಕಶ್ಯಪಾಗಸ್ತ್ಯವಾಸಿಷ್ಠಾದಿ । ಪರಮಮು ನಿವರರುಧರಿಸುತ್ತೆತ್ರಿಯಾಯುಷಂ । ನೆರೆಪಡೆದಭಸಿತನಿನ್ನಾಣ್ಮನೆಶರೀರತದ್ಭ ಸ್ಮಾಕೃತಿತಾಳಿಯೇ ‖ ಪರಿವಿರಾಜಿಸುತಿಹುದುನೋಡೆಂದುಸಖಿಜನರು । ಕರ ವೆತ್ತಿದೂರಣಿಂತೋರವೀಕ್ಷಿಸಲೊಡನೆವುರವಣಿಸಿದುಃಖಭೋರ್ಗರೆವುತ್ತೆಶೊ ಕಾಶ್ರುಸುರಿವಕ್ಷ್ಣಾಯುಗಳದಿಂದೇ ‖ ೮ ‖ ಭೇರಿಭೋರ್ಗರೆದುರೋದಿಸುತೆಪರ ವಶದಿಂದ । ತಾರೆಶನಾತ್ಮಸುತೆತವಕವೆರಸ್ಯೆದೆಕರ । ನಾರಿಜಂಗಳಲಿಬಾಯಮುಸು ರಹೊಡಕೊಳುತಬಳಿಸಂದುತ್ತದ್ವಾಬದಿಯೊಳಗೇ ‖ ನಾರಿದೊಪ್ಪೆನೆಕೆಡದುಪ್ರೊ ರಳ್ದುರುಳ್ದುಕಲಹಂಸ । ಸಾರತಿಳಿಗೊಳದಿಕ್ರೀಡಿಸುವಂತೆಬೆಳ್ಮುಗಿಲ । ಸೇರಿ

ಥಳಥಳಿಪವಿಸ್ಫುರ್ಲತೆಯವಾಳ್ಕಿಯಿಂಕೋಮಲಸುವರ್ನಾಂಗವೊ ॥ ೧೦ ॥
ಥಳಥಳಿಸಿತದಬ್ಬಾದಿರಾಶಿಮಧ್ಯದಿಪ್ಪೋಳಿಯೆ । ಲಲನೆಚಿತಭಸಿತಮಂಯೆರಡು
ಕರಕಮಲಂಗ । ಳಲಿತುಂಬಿತಲೆಯೊಳಂಕಳೆದುಕೊಳೆಶತಪತ್ರದಲರದೂಳಿಯೊ
ಳಾಳಿದಾ॥ ಯಳೆಯಬೆಳ್ದುಂಬಿಗಳಬಳಗದಂದದಲಿಕುಂ। ತಳಭಸ್ಮಚಿನ್ಹೆಯಿಂ
ಪೆಸೆಯೆಕೋಮಲದೇಹ । ಮಲರಹಿತಯೋಗೀಶರನ್ನ ದೊಳುಭಸಿತಮಯವಾ
ಗಿಸಲೆರಾಜಿಸಿದುದಾ ॥ ೧೧ ॥ ಲಲನೆತದಬ್ಬಾದಿಯೊಳುಬೀಳ್ಸ ಪೊರಳ್ದಿದ್ದು
ತಾಂ । ಕುಳಿತುಶೋಕಿಸುತಿರಲುವ್ಯೋಪ್ಪಿದಳುಕೊಳೆಳೊಲಂ। ಮುಳುಮುಳು
ಗಿಯೇಳುತಿಹಕಳಹಂಸನೊಬೆಳರ್ಪಕ್ಕಿಯೋಯುಂಬಂದದೀ ॥ ನಳಿನಾಸ್ತ್ರ
ನಂಗನೆಯುತನ್ನೋಪನಂಗಕಳೆ । ಗಳನುಪ್ಪೊಂದೊಂದಬಣ್ಣಿಸುತಕರೆಕರೆದು
ತಾ । ನಳುತಿರ್ದಳ್ದನುವನಿಪರಾರುಸ್ವಲ್ಪಪೇಳುವೆಕೇಳುಕಂಬುಕಂಠೇ ॥
ಯಲೆಕಾಂತಕಾಳೋರಗನಪ್ಪೋಲ್ವವೀರಜಡೆ । ಸಲೆವಿರಾಜಿಸುವಮುಮಸ್ತಕ
ಮೆಲ್ಲಿಕಂಡೆಂದು । ಕಳೆಯುಂತೆಯಸೆವೆನೊಸಲಲ್ಲಿಸಿಂಗಾಡಿಸೋಲಿಸುವ ಕುಡಿ
ಪುರ್ಬದೆಲ್ಲೀ ॥ ಲಲಿತಾರುಣಾಂಕಶತಪತ್ರದಳದೋಲ್ಮೆರವ । ಬೆಳಪಕ್ಷ್ಮಯುಗ
ಳಂಗಳೆಲ್ಲಿಚಂಪಕದರಲ । ಗೆಲಿವನಾಸಿಕಮೆಲ್ಲಿಯಳೆವೆರೆಯಗೆಣೆಯಾದನು
ಣ್ದುಯವೆಲ್ಲಿತೋರಾ ॥ ೧೩ ॥ ಕುಂದಕುಟ್ಮಳಪ್ಪೋಲ್ವದಂತಪಂಕ್ತಿಗಳೆಲ್ಲಿ ।
ಛಂದದಿಂಪ್ರೊತಿವದರ್ಪಣಕಪ್ಪೋಲಗಳೆಲ್ಲಿ । ಬಂಧುರದಕಂಬುಕಂದರಮೆಲ್ಲಿ ವಿ
ಸ್ತಾರವಕ್ಷಸ್ಥಳೀನಾದುದಾ ॥ ಗಂಧಸಿಂಧೂರಮಂಭಸ್ಥಲಂಗಳಪ್ಪೋಲ್ವ ।
ದ್ವಂದಭುಜಗಳುಯೆಲ್ಲಿ ಚಂಪಕಸುಮಾಲೆಯುಗ । ಳಂದವಿಂದೆಸೆವತೋಳುಗ
ಳೆಲ್ಲಿಯರುಣಾಬ್ಜಕೆಣೆಯಾದಕರಗಳೆಲ್ಲೀ ॥ ೧೪ ॥ ಯಳೆವಾಳೆಪರ್ನದಂತೆಸೆವ
ಕುಕ್ಷಿಯದೆಲ್ಲಿ । ಸುಳಿನಾಭಿಯೆಲ್ಲಿಯಳಿವಾಸೆಯದುಯೇನಾಯ್ತು । ಶಳೆಮಧ್ಯ
ಶೂನ್ಯವಾಗಿದೆಯುಪ್ಪೊಂಗದಲಿಸ್ತ[illegible]ಂಗಳಂನೆರೆಸೋಲಿಪಾ ॥ ಪೊಳೆವನು
ಣ್ಪೊಡೆಯುಗಳವೆಲ್ಲಿಸಿಷಂಗಮಂಗೆಲುವಜಂಘೆಗಳೆಲ್ಲಿ ಕಿನ್ನರಿಯಪೊಂಬುರು
ಡೆ । ಗಳನುಯೆಳಿಸುವವರಡುಗಳೆಲ್ಲಿಜತೆಜನರಯರ್ದಲದ್ದೆಯತಾಗುವಾ ॥
ಕನಕಕಂತುಕದಂತೆಮಿರೆವಮಡಯುಗವೆಲ್ಲಿ । ವಿನುತಮಾಂದಳಿರಪ್ಪೋಲುವ
ಮೃದುಸುಪದತಳಗ । ಳನುತೊರದಿವೆವೇಣುಯುಂಕುರವನೆರೆಗೆಲಿವಕೋಮ
ಲಾಂಗುಲಿಗಳೆಲ್ಲೀ ॥ ವನಜಾಸ್ತ್ರಸಿನ್ನಯಪೊಳೆವಬೆರಳುಗಳಾಗ್ರಮಿನುಗುತಿ
ಪತಾವಳಿಯುಸ್ಪ್ರೋಲ್ವಬಳ್ಳುಗುರ್ಗ । ಳನುತೋರುಸದಳಪಂಪುಮಳಪದ್ಮವ
ಳಿಯೇನಾದುದಕಟಾ ॥ ೧೫ ॥ ನಿನ್ನ ಬಿಡುವಿಂಮರೆವವಿಮಾನಕ್ಕೆಯಿಲ್ಲಿ

ಚೆನ್ನಾಗಿಮುಂಪಿಡಿವಮಕರತೋರಣವೆಲ್ಲಿ। ವುನ್ನತಸುಚೆತ್ರಚಾಮರಸಿಂಧು
ಸೀಗುರಿಗಳು ಯೇನಾದವಾಪ್ತರಪ್ಪಾ॥ ಸನ್ಮತವಸಂತಶಶಿಯುಸಮುಮಂತ್ರಿಗ
ಳೆಲ್ಲಿ। ಬಣ್ಣದುರೆಚೆಂಚುಕದಗಿಳಿಗುದುರೆಚೈತ್ರರಥ। ವನ್ನುಕಲಹಂಸಪಿಕ
ಮುಖ್ಯಖಿಳಖಗಸೇನೆಬಲವ್ರುಯೇನಾದುದಕಟಾ॥೧೭॥ ಹರಹರಿಯಜೇಂದ್ರ
ಮನುಮುನಿತಪ್ರೋಧನರುಗಳ। ನಿರುತಕಲ್ಲಿರ್ದೆಯುಜಿಶೇಂದ್ರರೆನಿಪರನೆಲ್ಲ॥
ನಿರದೆಚ್ಚುಯುಳಿಕಿಸುವಯುಸಮುಪಂಚಲಬಾಣಯಿಕ್ಷುಕೋದಂಡಂಗಳೂ॥
ಯಿರದೆಝೆಂಕರಿಸಸರ್ವದಮೂರ್ಛೆಗೊಳಿಪಷ। ಟ್ಚರಕಾಳಿನಾರಿಯುಳಿವಾಳಿಸು
ಳಿಬತ್ತಳಿಕೆ। ಕುರುಹಿಗೊಂದಿಲ್ಲಸಮಶರನೆಂಬಬಿರಿದುತಾನೇನಾದುದಕಟಹಾ
ಹಾ॥ ೧೮ ॥ ಯಿಟ್ಟೆರುದುಜಗಬಿರುದುಜೋರಗಂಡಿಲಿನಿಸುಳ್ವ। ಭ್ರಷ್ಟರಂ
ತಾಗುವರೆಮೂಲೋಕದವರುಗಳಕಟ್ಟೆವೋಹಾಪಾಶದಿಕೆಡಹಿಕುದಿಗೊಳಿಪದಿ
ಟ್ಟತನವೇನಾದುದೂ॥ ದಿಟ್ಟತ್ರಿಣಯುನಕೆಣಕದಿರುಯೆಂದುಪದಯುಗಮ।
ಕಟ್ಟೆಕೊಂಡಾನುಪೇಳಿದೊಡೆಗುರುವಾಗ್ನಿಯು। ಕಟ್ಟೆಂಗೆಶಿಲ್ಕಿನೀನ್ಯೈದಿಶಿವನ
ಗ್ನಿಗಣ್ಣಿಗೆಯಾಹುತಿಯುಪ್ಪರೇ॥ ೧೯ ॥ ಅರಸುಕಟ್ಟಲುಯಾಟಮುಗಿಯಿತೆಂ
ದೆನುತಿರ್ಪ। ನರರನಾಣ್ಣುಡಿಯೆಧಿಟನೀನಳಿಯೆನಿನ್ನಯು। ಪರಿವಾರವೆಲ್ಲಬಯು
ಲಾಗಿಪರಿಣಾಮಿಪರುತನಗೆಬಂದುದುದುಃಖವ್ರೂ॥ ಹರಿಯುಜೇಂದ್ರಾದಿತಮ್ಮ
ವುಳುಮಿಗೆನಿನ್ನ। ಶರಿರಮಂಶಿವನಬಾಳಾಕ್ಷಿಗಾಹುತಿಯಿತ್ತು। ಸ್ಥಿರಕರ್ದಿಸು
ಖಿಲಾದರುತನಗೆಯತಿಕಷ್ಟವಿಟ್ಟುದಕ್ಕಟಶಿವಶಿವಾ॥೨೦॥ ಪೆಣ್ಣುನಾನೆಂತು
ಜೀವಿಪೆನುನೀನಗಲಿದೊಡೆ। ಯನ್ನವೊಗಮಣಿದರ್ಪಣವನೋಡಿಚಿತ್ತೈಸು।
ನಿನ್ನನಳಿತೋಳ್ಗಳಿಂದೆನ್ನ ಕೋಮಲಕನಕಲತೆಯುದಿವ್ಯಾಂಗಮುಮನೂ॥
ಚೆನ್ನಾಗಿಬಿಗಿದಪ್ಪಿವಾಮಕರದಿಂಕಬರಿ। ಯುನ್ನುನೀಪಿಡಿದುವರಕರದಿಗಲ್ಲಮ
ನಾಂತು। ವುನ್ನತಮನೋಲ್ಲಾಸಪೇರ್ಚೆಬಾಯೊಳುಬಾಯುನಿಟ್ಟುಚುಂಬಿಸು
ವೊದಲೊಳೂ॥ ೨೧ ॥ ಯಲೆಕಾಂತೆಯುಖಿಲಲಾವಣ್ಯರಸವೊಸರುತಿಹ।
ಲಲಿತಬಿಂಬೋಷ್ಠದೊಳುಸಂಜೀವನಿದೆಬೇಗ। ನಲಿದುವೇದಾಮೃತಪಾನ
ಗೈಯ್ಯಲುಪ್ರಾಣಬಂದಪುದುಪರಮೇಶಗೇ॥ ಸಲೆಶರಣೊಬ್ಬಕ್ಕುಸ್ತಿರಬಾಳು
ವನುಯೇಳೇಳು। ತಳುವೇಕೆತವಕಿತದಿಂದೆದ್ದುಕುಸುಮಾಸ್ತ್ರನಾ। ಲಲನೆರತಿ
ದೇವಿತಾಂಬಣ್ಣಿಸುತೆಕರೆಕರೆದುಯಳುತಿರ್ದಳಬಲೆಕೇಳಾ॥ ೨೨ ॥ ರತಿಕಾ
ಮದಂಪತಿಗಳಿಂದೆಸಮರಿಲ್ಲೆಂದು। ಕ್ಷಿತಿಯೊಳಗೆಸಾರುತಿರೆರೂಪುಗುಣಯುವ್ವ
ನಾ। ಪ್ರತಿಭೋಗಮ್ಯೈಶ್ವರ್ಯದೊಳೊಂದುಕೊರತೆಯಿಲ್ಲೆನ್ನನೀನಗಲಬಹುದೇ॥

ಮತಿಹೀನೆದುಷ್ಟೆದುರ್ಗುಣಿಮುಗ್ಧೆಯರೂಪು । ಪತಿವಂಚನೆಯುಳ್ಳಾನಖಹತಿ
ಯುದಂತಕ್ಷತಕ್ಕತಿಬ್ಯಾಸರಿಂದಸೂಚಿ ಸಿದಬಂಧಂಗಳಿಗೆವಡಗಳೆಂದಂಮುನಿದೆ
ಯೋ ॥ ೧೩ ॥ ಯಲೆಕಾಂತನೀನಲ್ಲದುಳಿದಪುರುಷರುಯನ್ನ । ನೋಲಿದು
ಪಡೆದುಡುರಾಜನೆಂದುಭಾವಿಸುತಿಹೆನು । ಕಳೆವೆರಿಯುಶೇಖರನುಕರುಣವಿಲ್ಲ
ದೆನಿನ್ನದಹಿಸಿ ಯನ್ನಗಲಿಸಿದನೂ ॥ ಅಲಸದೆನಿನ್ನಮನವೆಚ್ಚನಾನಡದಪೆ
ನು। ವೊಲಿದಯುಂಗನೆಯಬಿಟ್ಟಗಲುವದುಧರ್ಮವೆ । ಕುಲಸತಿಕುರೂಪಿಯಾ
ದೊಡೆಯೇನುಗುಣವೆಕಾರಣನೀತಿವಿದಪುರುಷಗೇ ॥ ೧೪ ॥ ಯಿಂತಿಪರಿಪರಿ-
ಯಿಂದರತಿದೇವಿತನ್ನಯ । ಕಾಂತಕಾಮನನುಬಂಣಿಸುತೆಕರೆಕರೆದಳುತೆ ।
ಮುಂತೆದುಃಖಾಶ್ರುಲಿಂತೋಯುಧ್ಧಸುಯ್ಸುತ್ತೆಕಡೆವಾಗಿಲೊಳಂಬೆಳಗುತಿಪಾ
ಭ್ರಾಂತುಭ್ರಮೆಗಳನಳಿದನಿಸ್ಪೃಹನುಋತಿಧವಲ । ಕಾಂತಿಯಿಂದೊಪ್ಪುತಿ
ಹವೃಷಭರಾಜನಕಂಡು । ಕಾಂತೆರತಿದೇವಿಯಲ್ಲಿಂದಪ್ರೊಡಮಟ್ಟುಹಸ್ತಾಬ್ಜ
ಗಳಮುಗಿದೆಂದಳೂ ॥ ೧೫ ॥ ಧರ್ಮಸ್ವರೂಪಿಸೀನಿರ್ದುಗರ್ವದಿಯಿಕ್ಷು ।
ಧರ್ಮಯ್ಯಾಶಂಗವಿಸಿಕಂಗಳಪ್ರಯೊಗಿಸಲು । ದುರ್ಮರಣಮುಪ್ಪದೆಂದರು
ಹಬಾರದೆಸಂಮ್ಮನಿಹರೆಸರ್ವಜ್ಞರುಗಳೂ ॥ ಘರ್ಮಾಂಶುಕತಕೋಟಿಸುಪ್ರ
ಕಾಶನುದಹ । ಧರ್ಮಾಂಬಕಮತೆರೆವಸಮಯತಪಪಿಗೆಹಿಂಸೆ । ಕರ್ಮತರ
ವಲ್ಲೆಂದುಯತಿಶಾಂತಿಯಿಂತಿಳುಪಿಬಿಡಸದಾಟರಿಯಕ್ಕಟಾ ॥ ೧೬ ॥ ಬೇಕು
ಬೇಡೆಂಬೆರಡುನುತಿದಾತ್ಮಜ್ಯೋತಿಯೊಳು। ಯೇಕಸ್ತ್ರರಾಗಿರ್ದರೇನೋವಂದೀ
ಶನಾರ್ರ್ಯೆಕೆಕರ್ತಂನೀನುದುಷ್ಟಜೀವಿಗಳಪ್ರೇರ್ದಲಿಗೊಡದೆಕಾಪಾಗಿಹೇ ॥ ಆ
ಕಾಮನೈದಿಬಾಣ್ಗಳಪ್ರಯೋಗಿಸಲುಪಿ। ನಾಕಿಯತಪ್ರೊವಿಘ್ನಮಹುದೆಂದುಮ
ತ್ಪತಿಯನೂಕಿಯುಡವೆವಗೆಯೆನಿನಗವನುಯನುತಂಚಂಡೇಶನಂಶಾಪಿಶಿದಳೂ॥
ಯಲ್ಲಸತ್ಪುರುಷರನುಬಿಡದೆಕಾಡುತಲಿಹನು ಫುಲ್ಲಶರನೆಂದವರುಸುಮ್ಮನಿ
ರ್ದೊಡೆಯಿರಲಿ । ಯಲ್ಲಪೆಂಣುಗಳಸುಖದುಃಖವಂದಲ್ಲವೆಯನ್ನಪುರುಷನಯಿಾ
ಶನೂ॥ ಕೊಲ್ಲಲಿಚ್ಛೆ ಸೈಕಣ್ದೆರೆವಾಗನೀನುಶಿರ ॥ ದಲ್ಲಿರ್ದುಸುರಸರಿಯುಪರಿಸಿ
ನಿಟಿಲಾಗ್ನಿಯನು । ಮಲ್ಲೆನಿಲ್ಲಿಸದಾದೆಯನುತಗಂಗಾದೇವಿಯನ್ನು ಬೈದಳ
ಲ್ಲದತ್ತ್ರಳೂ ॥ ೧೭ ॥ ಪಡೆದವರಿಗಿಂದಹಿತವರಪರರುಮವರಪನ । ಗೊಡವೆಬಾ
ರದೆಯೆರ್ದೊಡಿರಲಿಜಾಮಾತತಾಂ । ಮುಡಿಯೆಮಗಳೆಂತುಬಾಳುವಳೆಂದುಮನ
ದಿಯುತಕರ್ರುಣಪುಟ್ಟದಾಯ್ತೆ ॥ ಮೃಡನಮೌಳಿಯೊಳಿರ್ದಶಿಡಿಗಂಣತೆರೆವಾಗ
ವಡನೆಯುಶಿಶಾಂಶಿಕರಬಿಂಬಯನಮುಚ್ಚುತ್ತ । ಜಡಜನಾರಾಚನವ್ರಳುಬಿಕೊ

ಳದಾದೆಯೆಂದುಡುಪತಿಯುಶಾಪಿಸಿದಳೂ ‖ ೧೯ ‖ ರತಿದೇವಿಯಿಂತುಪರಿಪ
ಲುಬಿಪಂಬಲಿಸುತ್ತೆ । ಶಿತಕಂಠನೀಸುನಿಷ್ಠಾಮಿಯೆಯೆಲ್ಲಲ್ಲ । ಸತಿಯರಿಬ್ಬ
ರನುತೊಡೆಜಡೆಯೊಳಿಂಬಿಟ್ಟಪ್ಪಿಯುಗಲದೇಸುಖಿಸುತಿರ್ಪೆ ‖ ಸತಿಯುಗೌರಾಂ
ಬೆಯುಜ್ಞಾದಿಬಯಲನ್ಯೈದಲಾ । ಪತಿಯನೆರೆಕೂರ್ತುತಪಿಸುತ್ತಲಿಹೆನೀನಿನ್ನ ।
ಸತಿಯುಬಂದಿರಲರಿಯನೆಂದೂಪೂಬಾಣಂಗಳೆಚ್ಚೆಚ್ಚರಂಗೊಲಿಸಲೂ ‖ ೨೦ ‖
ಅತಿಶಯದಿಯಳ್ವೆತ್ತುಯೆಬ್ಬಿಸದರಾರನ್ನ । ಆತಿಹಿತವರೆಂದುಬಗೆಯುಪಲೆವ್ರ
ದ್ರೇಕದಿಂ । ಹುತವಹಾಂಬಕದಿಂದದಹಿಸಿದ್ಯೈಸರ್ವಮೋಽಹನಹಿತಾರ್ಥಿಯನರಿ
ಯದೇ ‖ ಸತತಸರ್ವಾತ್ಮಾಭಿರಾಮಶಂಕರಶಾಂತ । ತತಸಕಲಜೀವನದಯಾ
ಪರನುಯೆನುತಖಿಳ। ಶೃತಿಸಮ್ಮತಜ್ಞಾರಿರುತ್ತಿಹರುಯೆತಿಕೋಽಪಿನಿನಗೆಯೊ
ಸರ್ಗಳ್ಯಾಕೇ ‖ ೨೧ ‖ ಯಿಂತೆಂದುಪತಲಕಿಚ್ಚೆಗೆಯೊರದಖಿಳರಲ । ತಾಂ
ಬಾಣನರಸಿಬ್ಬೈಬ್ಯೆದುಃಪಿಸುತ । ತ್ಯಾಂತದುಖಂಮಡಿಸಿಶೋಕಿಸುತೆಭೋರ್ಗ
ದಳುತ್ತೆಕೆಡೆದುಂಪೊರಳುತೇ ‖ ಕಾಂತಕಾತರಿಸಿದ್ದುಯೆರಡುಹಸ್ತಂಗಳಿಂ ।
ಪಂತುಂಬಿತುಂಬಿಯಾವೇಶದಿಂತದ್ಬೂದಿ । ಯಂತರಿಲ್ಲಿದೆತೂರಿಕೊಳುತಿರ
ಲುತದ್ಧೂಳಿಯದ್ಧುದುಮುದರಮದ್ಯದೀ ‖ ೨೨ ‖ ಬೆಳಗುಮುಗಿಲುಮುಸಕಿ
ದಂಬುಧಿಯಜಾತಮಂಡಲದ । ಪೊಲುಯಂಗಕಳೆಗುಂದಿತೋಽರುತಿರೆದೂರ
ದಿಂ । ಬಲಿನೋಡಿತಿಲದಳೆದರ್ಣುಗಿಯುಕರುಣಾಬ್ಧಿಯಾಬೆಪರಿದ್ಯೆದಿದಂತೇ ‖
ಘಳಿಲನೇಳ್ತಂದುಪಿಡಿದೆತ್ತಿಕುಳ್ಳಿರಿಸಿ। ತವೆಮುಖ್ಯಸರ್ವಾಂಗವಾವರಿಸಿದಾರಜ
ಮ । ಕಳವಿಳಾಸಿಯರಿಂದಕೊಡಹಿಸುತಕುರುಳ್ಕಟ್ಟಸಡಿಲ್ಬುಡಿಗೆಬಿಗಿದುಡಿಸ
ತ್ತೇ ‖ ೨೩ ‖ ಮೇಲುದನುಬಾಸಣಿಸಲೊಡನೆರತಿಕಂಬನಿಯು । ಜಾಲಮ
ಸುರಿಸುತ್ತೆಪಾದಾರವಿಂದಗಳ ‖ ಮ್ಯಲೆಬಿದ್ದೇಳಡೆಯುತಿದುಖವೆಗ್ಗಳಿಸಿರೋದಿ
ಸುತ್ತಿರಲಾಗಳೊ ‖ ಶೈಲಜಾತೆಯುಶಿರವಪಿಡಿದೆತ್ತಿಕುಳ್ಳಿರಿಸಿಬಾಲಕಿಯೆಅ
ವಂತೊಡೆದುಮುಂಗುರುಲ್ತಿದ್ದಿ । ಕೆಳಲಗೆಬರಿದೆಯುಡವಿಗೆಕಾಯ್ದತಿಳಿಜೊನ್ನ
ದಂತ್ತೆಬಯಲಳಲಿದೇಕೇ ‖ ೨೪ ‖ ನಿನ್ನಪತಿವಿರಸದಿಂದ್ಯೆದಿಬಾಣ್ಗಳನಿಡಲ
ತನ್ನಯತಪೋಸಿದ್ಧಿವಿಘ್ನಮಪ್ಪುದುಯೆನುತ।ಲುನ್ನತಮಹಾಕೋಽಪದಿಂದಿ
ಗಳಾಂಬಕವತೆರೆಯಲುರಿದಾಮಾರನೂ ‖ ಯಿನ್ನುಸರಸೋಕ್ತಿಯಿಂಶರಣ್ವ
ಲುಯತಿಶಾಂತಿ । ಯಿಂನೋಡಲೊಡನೆಜೀವಿಪಸ್ಮರನುಪುಸಿಯಲ್ಲ । ಪನ್ನಗಾ
ಭರಣಮುನಿದೊಡೆಕೊಲ್ವಶರಣುಪೊಕ್ಕರಕಾಯ್ವಕರುಣಾನಿಧಿಯೂ ‖ ೨೫ ‖
ಗೋತ್ರಸಂಭೂತೆಯಿಂತೆಂದುಕರೆಯಬಕೇಳಿಅತ್ರಿಜನಪುತ್ರಿನುಡಿದಳುತಾಯೆ

ಯನ್ನಯಕಳತ್ರನಂಗಮುನಗ್ನಿಹೋತ್ರನಾಹುತಿಗೊಂಡುಭಸ್ಮೀಕೃತಂಗೈದನೂ ॥ ಧಾತ್ರಿಯೊಳುಪಗ್ಧಪಟಮುಮುಸುಯಾಡಿಪರುಂಟೆ । ಗಾತ್ರಮಿರೆಪ್ರಾಣಪಿಂಗಲುಶಿವಂಸಂಜೀಪ । ಮಾತ್ರಮಿತ್ತುಡೆಯಿಾವಮಾವದೇವರುಮಾಗೆಬಯುಲರೂಪಿಸಬಲ್ಲರೇ ॥ ೩೬ ॥ ಮಾರ್ಕಂಡೇಯನಪಿಡಿಯಲೆಳಸಿದೂತರವಡನೆ । ಅರ್ಕಜಂಘುಡಿಘುಡಿಸಿಬರವರಲುಕೋಪದಿಂ । ದುರ್ಕಿನಿಟಲಾಂಬಕದ ಜ್ವಾಲೆಯಿಂದಹಿಸಲಖಿಳಾಮರರುಮೊರೆಯಿಡಲ್ಕೀ ॥ ಕರ್ಕಶಮನುಳಿದತಿಯಾವಲೋಕನದಿಂದೆ । ದೈವರ್ಕಳುಂನೋಡುತಿರಲವನಸಂಸ್ಪೃಷ್ಟಿಸಿದ। ತೀರ್ಕಣಿಸುದುಃಖಮುಂಶಿವನಮರೆಯೊಕ್ಕುನಿಂನ್ನೋಪನಂಪಡೆಕೀಳ್ಪದೀ ॥ ೩೭ ॥ ಕೌರ್ವಿಲ್ಲನರಸಿಯಳಕಂಣೀರನೊರಸುತ್ತೆ। ಪೂರ್ವಿರನಣುಗಿನುಡಿದಳುಕೇಳುಮತ್ಪತಿಯು । ಪೂರ್ವದಿಮಹಾನಾಟ್ಯವಾಡುತಾವೇಶದಿಂದನಲಾಂಬಕವತೆರೆಯಲೂ ॥ ಸರ್ವಾಲೋಕಾದಿಲೋಕಮುಉಯಂಗೈದುತಾ । ನೋರ್ವನೆನಿಂದುಕರುಣಾಕ್ಷಿಯಿಂದೀಕ್ಷಿಸಲು । ಗೀರ್ವಾಣಮುಖ್ಯಸಚರಾಚರಾತ್ಮಕರುಗಳಸೃಜಿಸಿದನುನಿಮುಷದೊಳಗೇ ॥ ೩೮ ॥ ಯಿಂತೆಂದುತಿಳುಪುತವಡಂಬಡಿಸಿಕರದೊಯ್ದು । ನಿಂತುಮರೆಯೊಳಗಗಜೆರತಿಯುಶಿವಸನ್ನಿಧಿಗೆ । ಶಾಂತವಕದಿಂಕಳುಹಳಭಯಭಕ್ತಿಯಿಂದಾತಪೊಮಟಪವನೂ ।" ಸಂತೋಷದಿಂದಲೊಳಪೋಪಾಗಪರಮೇಶ ॥ ಕಂತುವಂದಹಿಸಿಕೋಪಮನುಳಿದುತನ್ನೊಳತಿ । ಶಾಂತಿಯಿಂಮೂರ್ತಿಗೊಂಡೊಪ್ಪುತಿರಲಾಗರತಿಶಿವನಸುಮ್ಮುಖವಸಾರ್ದೂ ॥ ಶಿವನಶ್ರೀಪಾದಪದ್ಮಂಗಳಿಗೆ ಭ್ರಮರಾಳಿ । ಕವಿದುಮಕರಂದಪಾನಂಗೈವಮಾಳ್ಕೆಯಿಂ । ಯುವತಿನಡುಮಣಿದುಮುಂಗುರುಲ್ಮುಸುಕಿನಿಂದೆಸೆವನೊಸಲ್ಸಾಚಿಕರಯುಗಳದೀ ॥ ತವೆಯುಂಪ್ರಿದ್ವಂದಮುಂಪಿಡಿದುಪೊಂದಿಸಲೊಡನೆ । ಭವತನ್ನೊಳುವಿಚಾರಿಸದೆಮವಳಾರೆಂದು । ಸವೆಯದೈಶ್ವರ್ಯದಿಂಬಾಳುಮುತ್ತೈದೆಯಾಗೆನುತೆಕರುಣದಿವರಸಲೂ ॥ ೪೦ ॥ ತ್ರಿಣಯನತಿದಯದಿವರಕರಕಮಲದಿಂದವಳ । ಫಣೆಯಪಿಡಿದೆತ್ತಲೇಳುತ್ತಹಸ್ತಪದ್ಮಗಳ । ವನುತೆಮುಕುಳಿಸಿನಿಂದುಯುಲೆದೇವದೇವೇಶದೇವಕುಲಚಕ್ರೇಶ್ವರಾ ॥ ಪ್ರಣುತಮಂದಾರಪಾವನರೂಪನೀವೀಗ । ಲೆನಗೆಮುತ್ತೈದೆಯಾಗೆಂದುಯಾಶಿರ್ವಚನ। ಸನುಮತದೊಳಿತ್ತುದೆಸತ್ಯಮಾಗಲಿಮನ್ನಪುರುಷಗುರುವಾಜ್ಞೆಯಿಂದೇ ॥ ೪೧ ॥ ಬಂದುಪುಷ್ಪಸೂನಬಾಣ್ಗಳಪ್ರಯೋಗಿಸೆಕೋಪದಿಂದೆನಿಟಿಲಾಂಬಕಮತೆರೆಯಲುತದಾಜ್ಞೆಯಿಂ।ದೆಂದುಭಸ್ಮಸ್ವರೂಪಕನಾದಮುತ್ಕಾಂತನೆತ್ತುಮುತ್ತೈದೆಯುಹೆ

ನೂ ॥ ಯೆಂದಿಂಪುವಡೆಪನೆಕೆಂಬನಿಯುಮುಂಬನಿಯೊಡನೆ । ದ್ವಂದಶ್ರೀಪಾದಾ
ರವಿಂದಂಗಳಿಗೆಪ್ರೊಲಿದು । ಕೆಂದರ್ಪನರಸಿಮುಗುಳೆರಗಲೀಶ್ವರಕೇಳಿಕರುಣಾರ
ಸಾದ್ರ್ರಮನದೀ ॥ ೪೦ ॥ ಮೌನಮುದ್ರೆಯೊಳಿರ್ದಮೌನಿಗಳತಡಹಿದಗೆ ।
ಹಾನಿಯುಪ್ಪುದುನಿನ್ನಪತಿತಪೋನ್ನೈಷ್ಟ್ಯಯಿಂ । ದಾನಿರಲುತತ್ತ್ಪ್ರೊಚಲನೆಗೈ
ಯ್ಯಲುಕೋಪವಿಂನೋಡೆದಹನವಾದಾ ॥ ನೀನುಬದೆರಗಲಾವಿತ್ತಯಾಶೀರ್ವ
ಚನ । ಮೇನುಪುಸಿಯದುಪುನರ್ಭವಸಿಬಂದಪನೆಂದು । ನೂನಕರುಣಾವ
ಲೋಕನದಿಂನಿರೀಕ್ಷಿಸುತ್ತಲಭಯವಿತ್ತೂ ॥೪೧॥ ಪೋಗೆನಲುಮುಗುಳೆಪ್ರೊಂ
ದಿಸಿಜನಿಸಿಬರ್ಪನಕ । ಪೋಗೊಲನಗಲಿಜೀವಿಪೆನೆಂತುಯೆನಲೀಶ । ಯಾಗಿಲ್ಲಿ
ಕುಳಿತುಕಣ್ಮುಚ್ಚಿಮನದೊಳ್ನಿನ್ನಪುರುಷನಂನೆನೆಯನಲ್ಕೇ ॥ ಸೋಗೆಗಂಗ
ಳೆನೀರೆಕುಳಿತುಕಂಗಳಮುಗಿದು । ರಾಗದಿಂಸ್ಮರಿಸಲ್ಬಂದುಬಿಗಿದಪ್ಪ್ರ ।
ತಾಗಚುಂಬಿಸಿನಾನಾವಿಧಕ್ರೀಡೆಯಿಂದೆರವಿಸುತ್ತಿರಲ್ಕಂಡ್ದಿರೆಯಲೂ ॥ ೪೪॥
ಪುರುಷನದೃಶ್ಯನೈದಲುರತಿಯುಯಿಾಶಂಗೆ । ಮರಳಿಹಸ್ತಾಬ್ಜಗಳಮುಗಿದು
ಯೊದುದನೆಲ್ಲ । ತರುಣಿಬಿಂನೈಶಪೇಳಲುನಿನ್ನಪತಿಯುಸಾಕಾರದಿಂದೈದುವನ
ಶಾ ॥ ಸ್ಮರಿಸುತ್ತಲಂತರಂಗದಿಸುಖಿಪೆಪೂಗೆಂದು । ಕರುಣದಿಂದವಳಮನ್ನಿ
ಸುತಬೀಳ್ಕೊಡಲೆರಗಿ। ಪೋರಮಟ್ಟುತತ್ತ್ಪ್ರೊಮುಂಟಪವಗಿರಿಸುತೆಯುಚರಣಾ
ರವಿಂದಗಳಿಗೇ ॥ ೪೫ ॥ ಮಣಿದುಪ್ರೊಂದಿಸುತೆದ್ದುನಿಂದುಶ್ರೀಕರಯುಗ್ಮ ।
ವನಜಂಗಳಂಮುಗಿದುಯನ್ನಜನನಿಯಿಯನ್ನ । ಘನದುಃಖಬೇಗೆಯನ್ನಿಮ್ಮ
ಯದಯಾವರುಷಗರಸಿನಂದಿಸಿದೆತಾಯೇ ॥ ವ್ರಣಲುಡಲುಸುಖಿಪಾಗಸಕಲ
ಬಂಧುಗಳೆಲ್ಲ । ತನಗೆಡರುಬಂದಾಗಯಡಹಿಕಾಣರುಜನರು । ಮನದಳಲಪರಿ
ಹರಿಸಿದೌಲೋಕಮಾತೆನಿಮಗಿಂದಹಿತವರಕಾಣೆನೂ ॥ ೪೬ ॥ ಮತ್ಕಾಂತನು
ದಿಸಿಬಹನೆಂದುಪರಮೇಶನೊಲಿ । ದುತ್ಕರುಣದಿಂದಬೆಸನಿತ್ತಿಹನುನಾನುಯರ
ಸುತ್ಕಂಜನಾರಾಚವನ್ನುಪೋಪೆನುನಿರೂಪಮನುಯಿಯ್ಯೆಂದೆರಗಲೂ ॥ ಸ
ತ್ಕರಿಸಿಪರಸಿಬೀಳ್ಕೊಡಲುಮುಗುಳೆರಗಿಹಮ। ಕೃತ್ಕುವರಿಯಲ್ಲಿಂದಪೊರಮಟ್ಟು
ದುಸ್ಸಾರಮಾದಕಾನನವಪೊಕ್ಕು ಪೋಗುತಿರೆಲಾಳಿಯುಹುಬೆಂಬಳಿಯೊಳೈತರು
ತಿರೇ ॥ ೪೭ ॥ ಅವರನಿಲ್ಲಿಸುತೆಪೂರಾಣ್ಯದೊಳುಪೋಪರ್ಗೆ । ವಿವಿಧಮಾಭ
ರಣವ್ಯೈಕೆನುತೆಲ್ಲವಂತೆಗದು । ಯುವತಿಸುಗುಣಿಗೆಯಿತ್ತುಕಾಂತಕೈವಶ
ಮಪ್ಪತನಕತಾಬಾರೆನೆಂದೂ ॥ ಸವೆಗೋಲನರಸಿಮುವರಿಗೆಬುದ್ಧಿಪೇಳಿತ ।
ಧ್ಭವನಕ್ಕೆಬೀಳ್ಕೊಟ್ಟುರತಿದೇವಿಯೋರ್ವಳೆ । ಅವಿರಳಸುವೈರಾಗ್ಯದಿಂದಡವಿ

ಪಥವಿಡಿದು ತರದಳಿಲಿ ಒಡಜವದನೇ ॥ ೪೪ ॥ ಯಿದುವೆಬಾಣಾಖ್ಯಸಾಯೋಜ್ಯಪ್ರಬಂಧಮು । ತ್ರಿದುವೆನವಮೋಹನತರಂಗಿಣಿ ಯಭಿಧಾನ । ಯಿದನು ಶ್ರೀಕೊಳೂರರಾಮೇಶನುಡಿಸಿದೊಡೆಪೇಳ್ದ ಶಂಕರನುವಲಿನೂ ॥ ಯಿದನುಸರಸೋಕ್ತಿಯಿಂಬರ ದೋದಿಪೇಳ್ಕೇಳ್ವ । ಸದುಹೃದಯರಾದ ಸತ್ಪುರುಷರಿಗೆಸಂತಸದಿ । ಕುಧರಜಾರ್ಧಾಂಗಸೌಭಾಗ್ಯ ಸಂಪದಸೌಖ್ಯ ವಿತ್ತುರಕ್ಷಿಸುವ ಒಡದೇ ॥ ೪೯ ॥

ಅಂತು ಸಂಧಿ ೭-ಕ್ಕಂ ಪದನೂ ೩೦೧-ಕ್ಕಂ ಮಂಗಳಮಹಾ.

॥ ಶ್ರೀ ಶ್ರೀ ಶ್ರೀ ॥

ಶ್ರೀರಸ್ತು.

--)*(--

॥ ಶ್ರೀಗುರುಬಸವಲಿಂಗಾಯನಮಃ ॥

ರತಿದೇವಿಯು ಶಂಬರಕರ ದೊಯ್ದುದ್ದು.

॥ ಪಲ್ಲವಿ. ॥

ಶಿವನಿತ್ತವರನಿರೂಪದಿಪತಿಯನರಸುತ್ತ । ಯುವತಿರತಿ ಘೋರಕಾನನಹೊಕ್ಕು ಪುಡುಕುತ್ತಧವನಕಾಣದೆ ದುಃಖದಿಂದಬನದೊಳಿರಲೂ ॥ ಪದ।

ಸ್ವರ್ದುನೀತರಳ ವೀಚಿಪ್ರರಾಜಿತಮೌಳಿ। ರರ್ದೇಂದುಶೇಖರನಮರ ಪತೀ
ನುತಭವಾ। ಪಾರ್ಥರಾವಳಿಜಂಝುಮರುತವರ ಮುನಿಪಾಲ । ಪಾಯುತ
ಮಚಂಡಾರ್ಯಮಾ ॥ ದುರ್ದೋಷಕಾನನಾನಲ ರೂಪಸುಕ್ಷೀರ ।
ಪಾರ್ಥಿನಿಷಂಗ ಭೂಧರ ಚಾಪದ್ವಿರದಸುರ । ಮರ್ದನವಹೇಶಸಲಹುಗೆ
ಸತತಕೋಳೂರ ಪುರವರದರಾಮೇಶ್ವರಾ ॥ ೧ ॥ ಶತಪತ್ರಸವಿಶಾಲ
ನೇತ್ರಪಾವನಗಾತ್ರ । ಕ್ಷಿತಿಧರಾಪತಿಯಾತ್ಮ ಜಾತೆವಿಖ್ಯಾತೆ । ಜಿತ
ಕಾಮನರ್ಧಾಂಗಿಯಮಳಕರು ಣಾಪಾಂಗಿಮಹಿಷ ಪೂರ್ವಮರಭಂಗೀ ॥
ಅತಿಬಳಾನ್ವಿತೆ ಹರಿಪರೂಥೆತ್ರಿಜಗನ್ಮಾತೆ । ಸತತಶರ್ವಾಣಿಗೀರ್ವಾಣ ವಂದಿ
ತಚರಣೆ । ಅತಿದಯದೊಳೆನ್ನ ಬಡಮತಿಗೆಬೆಂಬಲವಾಗು ಶ್ರೀಗಿರಿಜದೇವಿ
ಬಿಡದೇ ॥ ೨ ॥ ಚೋರತ್ವದಿಂದೆತಹ ಪುಷ್ಪದೊಳುಪ್ರೊಂದರಳು। ಧಾರುಣಿ
ಯೊಳಂಬೀಳಲದುತಾನು ಪರಿಸುತಿಪ । ನಾರಿಶಿವನಿಗೆ ಸಲ್ಲಲೆಂದಫಲದಿಂದಲ
ತಿಜಾರಸ್ಪೋತಂಗೆಪ್ರೊಲಿದೂ ॥ ಪ್ರೊರಂತೆಗಣಪದವನಿತ್ತ ಯೀಶನ್ಮಪಾದ।
ಪಾರಿಜಂಗಳನು ನೆರೆಕೂರ್ತಮಳಸತ್ಕಥಾ । ಸಾರಾಮೃತದಗುಟುಕಮನ್ಮನ
ಚಕೋರಮರಿಗೊಲಿದಿತ್ತು ತೃಪ್ತಿವಡಿಸಾ ॥ ಪ್ರೊಸಬಟ್ಟಮುತ್ತಕೆಂಬವಳಮಿ
ಸುನಿಯಗುಂಡ । ನೊಸೆದುಪ್ರೊಂದೊಂದತರತರದಿ ಸರಗೊಳಿಸುತ್ತ । ಸಸಿನೆ
ಧರಿಸಿದರವು ರೋಸ್ತಳದಿಪ್ರೊಪ್ಪಿರಾಜಿಸುವಂತೆ । ಮದ್ವಚನದಾ ॥ ರಸಭರಿ
ತಸತ್ಕಥಾಮಣಿಮಾಲೆಯನು ನೊಲಿದು । ಕುಶಲದಿಂದೋದಿಪೇಳುವಲಾಲಿಪ
ರ್ಗಳಿಗೆ । ಯಸೆದುಹೃದ್ಭೂಷಣಮದಾಗಿ ಶೋಬಿಸುವಸೊಬಗನುಕೇಳು
ಕಂಬುಕಂಠೀ ॥ ೪ ॥ ಕಂಜದಳನೇತ್ರೆ ಕಮನೀಯಕಾನಕಗಾತ್ರೆ। ಮಂ
ಜುಮೃದುಮಧುರವಾಣಿಯೆಕೇಳುಷಟ್ಚರಣ । ಸಿಂಜನಿಗನರಸಿರತಿದೇವಿ ಶಿವ
ನೊಲವಾಂತು ತತ್ಪತಿಯನರಸುತ್ತಲೀ ॥ ಅಂಜದಳಕದೆ ಪಲವನೆಣಿಸುತ್ತಪ
ಲುಬುತ್ತಪತಿಯಂಕಾಣ್ಬಕಾಂಕ್ಷೆಯಿಂ । ನಂಜುಗೊರಳಭವನಂನಾಣ್ಮ
ಕಂದರ್ಪನೆಂದಿಗೆಪ್ರೊಂದು ಗೊಳಿಪೆವಲಿದೂ ॥ ೫ ॥ ಯೆಂದಿಂಗೆಕಾಣ್ಬೆನೊ
ಯೆಂದುಪದಕೆರಗುವೆನೊ । ಯೆಂದುಮಾತಾಡುವೆನೊಯೆಂದವರ ಪಾದಾರ ।
ವಿಂದಗಳ ಸೆವೆಮಾಡುವೆಷಡುರ ಸಾಯನವನುಂಡು ಬಿಡಲಾನುಂಬೆನೊ ॥
ಯೆಂದುಮೃದುತಳ್ಪ ದೊಳುವಲ್ಲಭನತೊಡೆಯಮ್ಯೇ।ಲೆಂದುನಾಕರೆಳಿತುವೀಳ್ಯ
ವನುಡಿಸಿಯಿತ್ತಪಿನೊ । ಯೆಂದುಮುಡಿವಿಡಿದುರಸತಾಂ ಬೂಲಗುಟುಕಿತ್ತು
ಯೆಂದಧರಚುಂಬಿಸುವೆನೋ ॥ ೬ ॥ ಯೆಂದೆನ್ನ ಗುರುಕು ಚವತನ್ನೆರ್ದೆಗ

ಮರ್ದಪ್ಪ । ತೆಂದುಪರಿಪರಿ ಬಂಧದಿಂದೆನ್ನರಮಿಸುವನೊ । ಯೆಂದುಕಂದ
ರ್ಪರಾಯನು ಸಭಾಮಧ್ಯದಲಿಕುಳಿತು ವಾಲಗಗೊಂಬನೋ ॥ ಯಂದೆನ್ನ
ವಾಮಭಾಗದಲಿ ಕುಳ್ಳಿರಿಸಿಕೊಂಡು । ಯಂದಿಂಗೆಯುನ್ನನಗೆಮೊಗಪದ್ಮಮು
ಮನೊಲಿದು । ಯೆಂದುತನ್ನಯಕಟಾಕ್ಷೇಕ್ಷಣದಿ ಭಾವಿಸುತನೋಡಿ ಪರಿಣಾ
ಮಿಸುವನೋ ॥ ೭ ॥ ಯಿಂತೆಂದುರತಿಪತಿ ವ್ಯಾಮೋಹದಾಲಾಪ । ಚಿಂತೆ
ಯಿಂವ್ಯೈಮರದುಪರವಶಾಬ್ಧಿಯುಮುಳಗಿ । ಕಂತುಕಾಂತನಕಾಣ್ಬಕಾಂಕ್ಷಮ
ನಮುಂದುಪರಿದಿತರ ಮಂಬಗೆಗೊಳ್ಳದೇ । ತಾಂತಕದಿಂದೆನಿರ್ಜನವಾಸದುಸ್ತ
ರದಕಾಂತಾರಮಂಪೊಕ್ಕು ಭೀತಿಸದೆಖಗಮೃಗದ । ಶಿಂಥಿಣಿಯನೋಡಿ ಶಂಕಿ
ಸದೆಬರುತಿರ್ದಳೇನೆಂಬೆನೇಮಿಸುನಿಬೊಂಬೇ ॥ ೮ ॥ ಜಾಲಿಜಾನೆಯುಬೋ
ರೆತರೆಯು ತುಗ್ಗಲಿಯುಯಂ। ಕೋಲೆಯುಂಕಾರೆಮಂಗಾರೆ ತಾರೆಯುಸೀಗೆ
ಬೇಲಬಗುನಿಯುತದುಕು ತಪಸಿಕವಳೆಯು ಕಾಡಕದಳಿಕಲುಮಾವುಜೇವ್ರೊ॥
ತಾಳಿಹೊಂದಾಳೆಯಕ್ಕೆಯು ಕಕ್ಕೆಪಚ್ಚಾರಿ । ಮೇಲಾದಬಿದಿರು ಜಿತ್ತ್ರಂಪಳು
ಕಿತೆಂಗುತರು । ಜಾಲಶಳೆಮೆಳೆಯುಬಹುಲ ತೆಗಳುಕಿಕ್ಕಿಕಿಕ್ಕರಿಪ ಕಾನನದೊ
ಳೂ ॥ ೯ ॥ ವರಭಲ್ಲುಕಂವ್ಯಾಘ್ರಸಿಂಹ ಮದಗಜವ್ರಜಂ । ಗುರುಕಿಡುವ
ಕಾಡಸೂಕರಕೋಣಮಹಿಷಿಬೆಡ। ರುರವಣಿಪಕಪಿಲೆಗೂಳಿಗಳೆರಳೆಯು ಹರಿಣ
ಸಾರಂಗಝಲ್ಲಿಮೃಗವ್ರೂ ॥ ಶರಭಭೇರುಂಡರಣಪದ್ದು ಬಾವುಲಿಪಂಗ । ಗರು
ಡಮೊದಲಾದ ಪರಪರಿಯಿಂದೆಪ್ರೊದರ್ವ ಭೀಕರದತುಳ ಖಗಮೃಗದನೆರವಿ ಯಾ
ರಾಣ್ಯದೊಳುಬರುತಿರ್ದಳಾಸ್ಮರನರಾಣೀ ॥ ೧೦ ॥ ಪರಮಋಷಿಸಭೆಯಂತೆ
ಕೌಸಿಕಾನ್ವಿತದಿಂದೆ । ನಿರುತಸುರಪುರಿ ಯಂತೆಮೈಗಣ್ಣಕುಲದಿಂದ ।
ವರಪಯೊನಿಧಿ ಯಂತೆವಿದ್ರುಮಸುಲತೆ ಯಿಂದೆಗಗನಮೆನೆವೃಕ್ಷಾಳಿಯಿಂ ॥
ಸುರುಚಿರದಣಿಕೋಣನಂತೆಪುಂಡರೀಕಂಗಳಿಂಹರನಗರಿ ಯಂತೆಶಿವಗಣದಸಂ
ಥಿಯುಬಂಧುರದವೈಕುಂಠ ಮೆನೆಹರಿನೆಲೆಯು ಯಿರಳನಭದಂತ್ತಮಳಸೊ
ಮಾನ್ವಿತಂ ॥ ೧೧ ॥ ಯಿಂತಪ್ಪಘೋರಕಾಂತಾರದೊಳು ಬರುತರತಿ। ಕಾಂ
ತಕಾಮನುವ್ರುದಿಸಿ ಬಸನೆಂದುವ್ರೊಲಿದುಶವು । ನಂತಕನುಮುಸುರ್ದಪ್ರಸಾ
ದಪರಕೆಯು ತಪ್ಪದೆಂದುನಿಶ್ಚೈಸೆದೆಯೊಳೂ॥ನಿಂತಲ್ಲಿನಿಲ್ಲದೈತರುತಾವಪ್ರೊದ
ರೆಡೆಯೋಳಾಂತಿಹ ನೊತರುಮೂಲಗಳಲಿಯಾಶ್ರೈಸಿಹನೊ । ಕುಂತಿಹನೊ
ಚಿಗುರ್ದಗಿಡಲತಾವಳಿ ಯನೆಳಲಮರೆಗೊಂಡೆಂದು ಯಡೆಯಡೆಯೊಳೂ॥೧೨।
ಕಾಂತವನಕದಿಂಪ್ರೊಕ್ಕುಪ್ರುಡಿಕರಿಸಿಕಾಣದ್ಯೆ। ದಂತೊಳಳಿಬಳಳಿವ್ಯುದುಪದದಿ ಪ

ರಳನ್ನುಳ್ಳಂಗ । ಳಂತುಳಿದುಃಶಂಕಿಸಸೆರತಿವಿರಹದಿಂದಮೈಮರೆದುಕಲ್ಗಳನೆದಹ ತೇ॥ಕುಂತುಕುಳ್ಳಿರದೆಯರಚುತೆಮೊಗಮನೆತ್ತಿಧ್ವನಿನಿಂತುಯಾಲಿಸುತೆಕಾಣ್ಕೊ ದೆನುಗ್ಗಿ ಕೆಡಹುತ್ತೆ । ಕಾಂತೆತವಕದೊಳಿದ್ದುಸುಯ್ಯುವತೆ ತನ್ನ ಕಾಂತನಪೆಸ ಗೊಂಡರಸುತೇ ॥ ೧೩ ॥ ಯಲೆಕಾಂತಯನ್ನಗಲಿಪೋಪಾಗನಿನ್ನಕಾಲ್ಗ ಳುಯಿದ್ದವೆನಿತೊಯುಹ ನಿಃಶಂನಿಮುಷಾರ್ಧ ಚಲನೆಯಿಲ್ಲದೆಸುಖಿಪಸುಖ ಮಳಿದುಪೋದದಕ್ಕೆ ತ್ತುಮನನಿನಗಾದುದೂ ॥ ಅಳಿಕನೇತ್ರಂಗೆಯಾಹುತಿ ಯಿತ್ತುಸುರರಸಂ । ಕುಳಕೆಸ್ಥಿರಕರ ಮಾಯ್ತುನಿನಗಾಯ್ತುಸತ್ಕೀರ್ತಿ ॥ ಸಲೆದುಃಖಿತನಗಾಯ್ತು ಪತಿವಿಯೋಗಮುವಾಗೆಸತಿಗೆಗತಿಯಿನ್ನಾವುದೂ । ಯಣ್ಣೆಅರಿಸಿನಗಂಧಕುಂಕುಮಂ ಪುಷ್ಪಂಗ । ಳನ್ನುಳಿದು ಶಿರಮುಂಡಣದಿ ಬಣಗುಮುಂದೆಯಾಗಿನ್ನುಂನಿರಾಶ್ರಯದಿ ಬಾಳುವೆನೆನೀನಳಿ ದಯಡೆಯಚಿ ತಿಯವನೊಟ್ಟಸೀ ॥ ನಿನ್ನಂತೆದೇಹಮುಂದಗಿಸುವೆನೆನುತ್ತಬಗೆ । ವನ್ನೆಗಂ ಗಿರಿಜಾತೆಯೊಳನಂಕಾಣಿಸಲು । ಪನ್ನಗಾಭರಣತತ್ಪತಿಯುದಿಸಿ ಬಹನೆಂದು ಬೆಸನಿಯ್ಯಲಾನುಳಿದಿಹೇ ॥ ೧೪ ॥ ಮದನಮೋಹನಗಾರನಾನಳಿದ ಬಳಿಕ ನೀಜೆದಕಿಬಾಯಾರಿದರೆಸಿಲ್ಕು ವೆನೆಯನ್ನಂತ । ಸುದತಿಯುರುದೊರಕುವರೆನಿ ನಗೆನಾಂಶಿವನಿರೂಪಮುವಿೂರದಸು ವಿಡಿದಿಹೇ ॥ ವದಗಿನೀನ್ನೈದಿಕಂಬನಿದೊಡೆ ದುಮ್ಮೈದಡಪಿ । ಮುದದಿಂದಕುಸ್ತರಿಸಿದೊಡೆ ಲೇಸುಯಿಲ್ಲದೊಡೆ । ವುದಿಸಿನೀ ಬಂದರಸಿಬಳಲಿದಪೆತತ್ತನುವನಳಿದ ಬಳಿಕಾತ್ಮೇಶ್ವರಾ ॥ ೧೬ ॥ ಯಿಂತೆಂದು ಫಲತೆರದಿಪಲುಬಿಬಾಯಾರುತಿರೆ । ಕಾಂತೆನೀನಾರುಪೆಸರೇನಾರಕುವರಿತ । ಅತ್ಯಂತ ನಾರ್ಯಾಕೆದುಸ್ತರದ ಕಾನನದೊಳಳುತಿರ್ಪೆ ಋಂನು ತಪ್ರೋರ್ವರೂ ॥ ಸಂತೈಪರಿಲ್ಲನಿರ್ಜನವಾಸವಿಘೋರ । ಕಾಂತಾರದೊಳರಸಿಕಾಣದೆಬಸವಳಿ ದುಚಿಂತಿಸುತೆಪಸುತ್ರಸೆಗಳಡಸಿನಡೆಗೆಟ್ಟು ಬಾಯಾರಿಚೆಂಡಾಗಿಸುಯಿದೂ ॥ ಸೊರಗಿಶೋಕಿಸುತಮೆಲ್ಲಡಿಯಿಡುತಲತಿಘೋರ । ತರದವಿಪಿನಾಂತರದಿ ಬೆದಕಿ ಬ್ಯಾಸತ್ತುಬರುತಿರಲುಮುಂದೊಂದು ಪೇರ್ದುರ್ಗಮಿರಲದರಬಾಹ್ಯದೊಳೆಸೆ ದುದುದ್ಯಾವನಂ ॥ ವರರಂಭದೊಡೆಯುತಳಿರಡಿಯು ಸೆವತಳೆಮಧ್ಯನೆರೆತೆಂಗು ನೆಲೆಮೊಲೆಸುಶಾಖೆಗಳಬಾಹುಬಂ। ಧುರದದಾಡಿಮುಹಸಿತವದನಕಂಗಳುಸೋ ಗೆಭೃಂಗಾಳಕಂಪತ್ರಮೇ ॥ ೧೮ ॥ ಯೆಸೆವಚಿತ್ರಾಂಬರಂಪುಷ್ಪರಸುಮೈಗಂ ಪ್ಪಿ । ಪೊಸೆದುಬಹುಪಲ್ಲಾವಳಿಗಳಾ ಭರಣಪಾಲಾಶ । ಕುಸುಮದಿಂದಲಂಕರಿ ಧ ಶುಕಪಿಕದಗಾನಗೀತಂಗಳೊಡನೇ ॥ ಕುಶಲದಿಂನರ್ತಿಸುವನವಿಲಂಗಳಿಂ

ದೊಳಿದು ಸಸಿನೆವನಪೆಂಣುಸಂಭ್ರಮದಿಂದಲಿದಿರ್ವಂದು ॥ ಅಸಮಾಸ್ತ್ರನಂ ಗನೆಯುಬಲಗೊಂಬವೊಳ್ಕೆ ಯಿಂದೊಪ್ಪಿಸಲೆರಾಜಿಸುತಿರೆ ॥ ೧೯ ॥ ರತಿದೇವಿತಾಪಿಸುತೆಬರವರಲು ಭ್ರಮರಸಂ । ತೆತಿಯಂಚೆಕೋಕಶುಕಪಿಕಮಯೂರಖಗವ್ರತತಿಕುರುವರಿದು ಭೋರನೆಯಿದಿರ್ವಂದೊಲಿದು ತಮತಮಗೆ ತವಕವೆರಸೀ ॥ ಅತಿಶಯದಿಯಾವರಿಸಲವಕೆಕೋಪದಿತನ್ನ । ಪತಿನಿಮ್ಮಬಲಬಲ್ಮೆಯಿಂದೀಶನಂಕೆಣಕಿ । ಮಥನಿಸಲುಪ್ರೋರ್ವನೊಪ್ಪಿಸಿಬಹರೆನಿಮಗಿಂದಹಿತಶತೃಗಳಕಾಣೆನೂ ॥ ೨೦ ॥ ಕಟ್ಟರಸನೊಪ್ಪಿಸಿಯೆ ಕೊಟ್ಟುಶತೃಗೆಮರಳಿ । ಬಿಟ್ಟೋಡಿಪೋಪಪಟು ಭಟರಯಮಕಿಂಕರರು । ಕಟ್ಟಿಬಾಧಿಸದಿಹರೆಯಾಳ್ದನೊಡನಳಿವರ್ಗೆವೀರಸ್ವರ್ಗಾಗದಿಹುದೇ॥ಯುಷ್ಟುದಿವಸದೊಡೆಯುಬಿರೊದೇಹವಳಿಯದೇ । ಭ್ರಷ್ಟರಂಜೀವಗಳ್ಬರುಸ್ವಾಮಿದ್ರೋಹಿಗಳು । ಯಿಷ್ಟರೆ ನೀವೆಮಗೆಮತ್ಸತಿಯುಯುಳಿದಬಳಿ ಕಾರಿರ್ದಸುಖಮದೇನೂ॥ ೨೧ ॥ ಅರಸನಳಿದೊಡೆಯುಪರಿವಾರಮತ್ತೋರ್ವಧಿಕ।ಧೊರೆಯನೊಲೈಸಿ ಬಾಳುವಿರೀಗಸಾನನ್ನ । ಪುರುಷನಳಿದಾರಸೇರುವೆ ನಾತ್ಮವಧೆಯೆಕರ್ತವ್ಯ ಮೆಂದುಜ್ಜುಗಿಸಲೂ ॥ ಹರನಿತ್ತಬೆಸನಿಂದಲರಸುತಿರ್ದಪೆವತಿಯ । ಕರತಂದುತೋರಿಸಲು ಯನಗೆತತ್ಪೂರ್ವದಾ । ಪರಮಬಾಂಧವರು ನಿಮಗಿಂದುಳರೆಯೆನುತನೆಲದೊಳುಕೆಡೆದು ರೋದಿಸುತಿರೇ ॥ ೨೨ ॥ ಶಶಿವಸಂತಾದಿಗಳುನಿನಗೆವಲಿದು। ಅಸಮಾಕ್ಷನಿತ್ತವರಕೆಯು ತಪ್ಪದೆಲೆತಾಯಿ । ವಸುಧೆಯೊಳಗೆಲ್ಲಿದ್ದೊಡಹರಸಿತಂದಿತ್ತಪೆವುರೋದನೆಯವೂಣುಬರಿದೇ ॥ ಬಿಸಿಲೊಳಂಬಿದ್ದುಬಾಯಾರಿಬಳಲುವದ್ಯಾಕೆ । ವಸೆದುತದ್ವನದಿನೆಳಲುಂ ನೀರುಯಿರ್ದಪೆವು । ರಸುವಿನಸುತಾಪಮಂತವಿಸಪ್ಪ ಹರಣವುಳಿದೊಡೆ ಕಾಣಲಹುದಖಿಲವಾ ॥ ಯೆಂದುಪಲವಂದದಿಂತಿಳುಹಿ ಯೆಬ್ಬಿಸುತಮುದ ದಿಂದಮಯೂರಗರಿಗುಂಚದಿಂನೆರಳಗೊಳಿಸಿ ಮಂದಾನಿಲಾಲಿವಾಟನ ಬೀಸುತೊಗಗೂಡಿಕರದೊಯ್ದು ತಿರಲೆಸದಳೂ ॥ ಬಂದಬಳ್ಬೇಸಗೆಯುಬಿಸಿಲ್ಗೆಯುಳವಳಿದಮಳ । ವೊಂದಳರಿಸಂತೆ ಕೋಮಲದಂಗಲತೆಯುಯತಿ । ಚೆಂದುಭಾವಜನರಸಿಬರವರಲು ತದ್ವನಂಕಂಗೊಳಿಸಿತೇವೇಳ್ವೆನೂ ॥ ೨೪ ॥ ಕಂದರ್ಪನರಸಿಕಾಂತಾರದೊಳುತೊಳಲಳಲಿ । ಚೆಂದಬಿಸಿಲಡಸಿತನುತಾಪದಿಂದಿಲ್ಲಿಗೈ । ತಂದಪಳುಶ್ರಮವತಪಿಸುವೆನೆಂದುಪ್ರೊಲಿದುಕೆಂಬಣ್ಣದಗುಡಾರಮುಮನೂ ॥ ಚಂದದಿಂವನದೇವಿನಿಮಿಸಿದಳೆಂಬಂತೆ। ಚಂದಳಿರಿನಿಂದೆಶೋಭಿಸುವತದ್ವನವಶ್ರೀ। ಯಿಂಪು

ನಂದನೆಪಕ್ಷಿ ವೃಂದದೊಡಗೂಡಿಬಳಿಸಂದೀಕ್ಷಿಸುತಿರ್ದಳಾ॥ ವುರವಣಿಸುತ್ತೈದಿ
ವಿಧುಮಂಡಲಮರಾಹುತಾಂ। ಭರದಿಂದಲಡರ್ಪಿಡಿದಂಕರ್ಬಿದಂತಹತಿ । ಗಿರದೆ
ವೃಚ್ಛಳಸಿಯೆತದಂಗದಸುಧಾರಸದಬಿಂದುಗಳುವನದಗಲದಾ ॥ ವರಲತಾಗು
ಲ್ಮಾವಳಿಗಳಾಗ್ರಗಳಲಿರದೆ । ಸುರಿದುಶೋಭಿಸುವಂತೆ ವೊಲ್ಲೆಮಲ್ಲಿಗೆಜಾಜಿ ।
ಯಿರುವಂತಿಶಾವಂತಿ ವೊದಲಾದ ಕುಸುಮಚಯಮರಲ್ದೊಪ್ಪಿರಾಜಿಸುತಿರೇ॥
ಹೊಗರೊಡದಚಿಗುರಿಂದೆವೊಗ್ಗೆ ಪೂವಿಡಿದಮುಡಿ । ಯಿಗಳಿಂದೆಕಾಯಿಪದಗಾ
ಯಿದೋರೆವಂ । ಬುಗಳಿಂದೆಯತಿಪಕ್ವಮೂಂತೆಳಸವೊಸರ್ವಪರಿಪರಿಫಳಾವಳಿ
ಗಳಿಂದೇ ॥ ವಗಲಾಣ್ಮಗಲ್ಕಿತಮರಾಜಯಿರದ್ಯೈತೆಂದು। ಬಗದುತದ್ವನಮಪ್ರೊ
ಗುತಡಂಗಿರ್ಪವಾಳ್ಕೆಯಿಂಬುಗನಕರ ಸಂದಿಸದನೆಳಲಿಂದ ವೊಪ್ಪಿರ್ದದಾಬನಂ
ಮಿಗೆವಾವನಂ ॥ ೨೭ ॥ ಪರಿಪರಿಕುಜಾತಗಳಗುಂಪಿನಿಂಪೆಂಪಿನಿಂ। ವರಪಕ್ವ
ಫಳದತೊಂಗಲ್ಜೊಂಪುಲಂಪಿನಿಂ । ಅರೆವಿರಿದಕುಸುಮನರುಗಂಪಿನಿಂ ಯಿಂಪಿ
ನಿಂ ತಣ್ಣೆಳಲತಂಪಿನಿಂದೇ ॥ ಸ್ವರಗೈಯ್ವಕೋಗಿಲೆಂಯುಧ್ವನಿಸೊಂಪಿನಿಂದೆ
ಬಂ। ಧುರದಷಟ್ಚರಣಾಳಿಘೋಷದಿಂತೋಷದಿಂ । ಗರಿಯುಪಸರಿಸಿಕುಣಿವನ
ವಿಲಚಯದಾಟದಿಂಶುಕನಿಕರಪಾಟದಿಂದೇ ॥ ೨೮ ॥ ಯಿಂತೊಪ್ಪುವಾಬನ
ವನೋಡುತ್ತಬರಲುಶಶಿ । ಕಾಂತಶಿಲೆಯಿಂದೆಬಂಧಿಸಿದಸೋಪಾನದಸು । ಪಂ
ತಿಯಿಂದಸರ್ವಶೀತಳಜಳದಗುಂಪಿನಿಂತಂಪಿನಿಂಶೋಭಿಸುತಿರೇ॥ ಸಂತತವಿಜಾ
ತಿಸಂಗದೊಳಿರ್ದುಸರ್ವಜನ । ಕಂತಾನುಸೇವ್ಯವಾಗಿಯೆಕಮಲ ಕುಮುದದ
ಲ । ತಾಂತಗಳಿಂದೆ ಮಸಶೋಭಿವಡೆವಿರ್ದುದಂ ಕಾಸಾರಕಂಗೊಳಿಸುತೇ ॥
ಜಗದಂಬಕಂಗಸಮಿಗಿಲುರುಪುರುಷರೀ । ಜಗದೊಳಿನ್ನಾರುಮತ್ಪತಿಯೊಡ
ನೆಸರಸದಿಂ । ಪಗಲುಸಂಗಮವಾಳ್ಪದತಿಸೌಖ್ಯವೆಂದುರ್ಬಿಕಮಲಚಯಮ
ರಳ್ದೊಪ್ಪಿರೇ ॥ ನಗುವತೆಲೆಪದ್ಮಿನಿವವ್ಯೈಥುನವೆನಾಲ್ವಿಧದ । ಮುಗುದೆಯರು
ನಾಲ್ಕುಜಾವವನರಿದುಭೋಗಿಪರು। ವೊಗವೆತ್ತಿನಿಮ್ಮನೋಡಲ್ಬಾರದೆಂಬಂತೆ
ಕುಮುದತಲೆವಾಗಿರ್ಪವೂ ೨೯ ॥ ಅರಳ್ದಾರವಿಂದಗಳನರಸಿಷಟ್ಚರಣಾಳಿ।
ಯುರಗಿಝೇಂಕರಿಸುತೆಮಕರಂದಪಾನಮಂ । ಹರುಷದಿಂಮಾಡುತಿರಲವರಗರಿ
ಘುತವಿಂ ಪೊರೆಸೂಸುತಂಪರಾಗಾ ॥ ಮರೆದೂಳಿಯಿಂಜರೆದುಕದಡಿದಸುವಾ
ಸಿಯೊಳ್ಗಿರದೆ । ವಳಪ್ರೊಕ್ಕುಕ್ರೀಡಿಸಿನಳಿನಕೇಸರಮು। ಮರಿಗಳಿಗೆಗುಟುಕೊ
ಯ್ಯೆಕೆಮ್ಮೈಯ್ಯನೋಡಿಬೆದರಲ್ ತಿಳುಪುತುಣಿಸುತಿರುವೂ ॥ ೩೦ ॥ ಕೊಳಲ
ಜಲದೊಳೆಯೊಳಿಮುಳುಗಿಕ್ರೀಡಿಸಿದಣಿದು। ಘಳಿಲನೆಸೋಪಾನಮಡರ್ದೇರು

ತಿರಲುಮಾಪ್ಪೊಳೆಯೆ । ತಮ್ಮಯಪ್ರತಿಬಿಂಬವೆಂಬುದನುತಿಳಿಯದೆಯಿದಿಗ್ಬ
ರ್ಪುದೆಂದೂ ॥ ಕಲಹಕ್ಕೆಕಾಲ್ಕೆದರಿಗರಿಯುವಸರಿಸಿತಮ್ಮ । ತಲೆಯಬಿದಿರ್ಚಿಸಿ
ಕಣ್ಣುಕೆಂಪೇರಿಚಂಚುವಿಂ । ದಲಿಕುರ್ಕಿರ್ವಣಸರಸದಿಂದಲಸಿಬಳಲ್ವಕಳಹಂ
ಸಕಂಗೆಸಬಿರ್ದಪ್ಪು ॥ ೩೧ ॥ ಸಿರಿಯರಸನೆಂಬಂತೆ ಚಕ್ರಿಯೆಂದೆನಿಸಿತ್ತು ।
ಮರುತಪಥವೆಂಬಿನಿಂಸತ್ಕವಿವಿತಾನದಿಂ । ವಕ್ಷೀರವಾರಾಸಿಯಂತೆಹರಿವಾಸ
ದಿಂವನದಂತೆಪುಂಡರೀಕಂ ॥ ವರಶುಕ್ಲಪಕ್ಷವೆಂಬಂತೆಕಮಲಾನ್ವಿತಬಿ । ನೆರೆ
ಪತಿವ್ರತೆಯಂತಕಾಂತಾನುಕೂಲದಿಂ । ಧರೆಯುಮಂಡಲದಂತೆಕುವಲಯಾನ್ವಿತ
ದಿಂದೆಸರಸಿಶೋಭಿಸುತಿರ್ದುದೂ ॥ ೩೩ ॥ ಲತೆಯಂಗತೀರವುಜಘನನಾಳವೆ
ಬಾಹು । ದ್ವಿತಿಕೋಕಕುಚಕಮಲವಾಸ್ಯಮೀನಾಕ್ಷಿಗಳು । ತತಭೃಂಗಚ
ಯಕೇಶಸುಳಿನಾಭಿತೆರೆಯೆತ್ರಿವಳಿಪತ್ರವಸನದಿಂದೇ ॥ ಅತಿಶಯದಿಬಹುಜಾತ
ವ್ರಾತಂಗಳೊಡೆವೆರೆದು । ಸತತಸುಪವೇತ್ರನಿರ್ಮಲಿನೆಪಾವನೆಯೆನಿಪ । ಸತಿ
ಯಂತೆತತ್ಸರೋವರವುಕಂಗೊಳಿಸಿತ್ತುರತಿಯಕಣ್ಮನಸುಗಳಿಗೇ ॥ ೩೪ ॥
ಶ್ರೀಕರದತತ್ಸರೋವರಮಶೀಕ್ಷಿಸಿರತಿ । ಲೋಕನಯನನತಾಪವಡಸಿಕೋ
ಮಲಕಾಯದಾ। ಕಳೆಯುಗುಂದಿಮುಖಬಾಡಿಬಾಯಾರಿದೂಙಿಸಿಬಳಲ್ದುಬಂ
ದುಬೇಗಾ ॥ ತಾಕಾಲುಗಳನುಮೆಲ್ಲನೆಯಿಡುತಸೋಪಾನ । ಜೋಕೆಯಿಂದಿಳಿ
ವುತಿರೆ ತನ್ನಪ್ರತಿಬಿಂಬಶಶಿ । ಯಾಕಂತಕಲ್ಗಳೊಳುಮಾಪ್ಪೊಳೆಯಲವನು
ನೋಡುತ್ತೆಸುಯ್ಯಾನದೊಡನೇ ॥ ೩೫ ॥ ಮೆಲ್ಲನೆಕಳಹಂಸತಂಗೊಳಲನಿ
ಳಿವಂತೆ । ಪುಲ್ಲಂಬನರಸಿಯೈತಂದೊಂದುಮೆಟ್ಟಿಗೆಯೊ । ಳಲ್ಲಿಮಂಡಿಸಿಯರ
ಡುಕಾಲುಗಳತಜ್ಜಲದೊಳದ್ದಲತಿಕಾಯ್ದುಕ್ಕುವಾ ॥ ಕಲ್ಲನುರೆನೀರಿನೊಳಗಿ
ಳುಹಿದೊಡೆಚುರ್ರೆಂದು । ಗುಳ್ಳೆಗಳುಯೆದ್ದುದ್ದತ್ತೆಣ್ಣಸಗೊಂಡವೊಳ್ಕೆಪದ । ಪ
ಲ್ಲವಂಮರದಂತೆ ಚುಯ್ಯೆಂದುಬಹುಶಾಂತಿಕಾಲ್ಗಳಿಂತಲೆಗಡರ್ದುದಾ ॥೩೬॥
ಮೀನಾಂಕನರಸಿಕಾಲ್ಗಳಿಗೆತಣ್ಣೀರ್ಗೆಟ್ಟ । ತಾನುಕರಚರಣಾಸ್ಯಮಂತೊಳೆ
ದುವಲವಿನಿಂ । ದಾನೀರೆರುಸದಪತ್ರಮಕೊಯ್ದುನಿರ್ಮಳಸುಶೀತಳೋದಕ
ವತೀವೀ ॥ ॥ ಮಾನುನಿಯುಯಿನಿಯಿನಿಸನೀಂಟಿಶಮನಮನ್ನೈದಿ । ತಾನೆದ್ದು
ಸೋಗೆನವಿಲಡರ್ವಂತೆ ವಿಮಳಸೋಪಾನಮುಮನೊಂದೊಂದ ಮೆಲ್ಲಮೆಲ್ಲನೆ
ಯೇರಿಬಂದುನಿಂದೀಕ್ಷಿಸುತಿರ್ದೆ ॥ ೩೭ ॥ ಸರಿಯುಪರಿಯೆಂಕಮೆಂಬಂತೆಪ
ತ್ರಾನ್ವಿತದಿ । ನೆರೆವೃದಯುಚಲದಂತೆಯರುಣಫಲಬಾರದಿಂ । ವರವೃಷಭನಂ
ತೆ ಶೃಂಗಾಂಕಿತಂಪಟಮುಮಂಗಳನಂತೆಕುಜನಾಮದಿಂ ॥ ಶರನಿಧಿಯವೋಲಖಿ

ಳವಕ್ಷಿಗಳರವದಿಂದೆ । ತರಣಿಕಿರಣಂಗಳಿಗೆ ಯಡೆಗೊಡದೆನೆಳಲಿನಿಂ । ಪರಮ ಯೋಗೀಶತಂತತಿಶಾಂತಿಯಿಂದೊಪ್ಪುವೆತ್ತೊಂದು ವಟವೃಕ್ಷವೂ ॥ ೩೮ ॥ ಸಲ್ಲಲಿತದಿಂದತತ್ಕೊಳಲತೀರದೊಳಿಸೆಯು । ಲಿಲ್ಲವಿಷಗಾಳಿಕರದೊಯ್ದುಯಾ ಕುಜದನೆಳ । ಲ್ಲಿತಳಿರ್ವಾಸಿಗೆಯುಮೇಲೆ ಸ್ಮರನರಸಿಯುಳಕುಳ್ಳಿರಿಸಿಪಂಫಲಗಳಾ॥ ಸಿಲ್ಲದೆಶಿರಿದುತ...ದಿತ್ತೊಡಮ್ಮವನುಮೆಲಲೊಲ್ಲದೆತತ್ಪತಿಯುಜಾನಿಸುತೆ ಕಣ್ಮುಚ್ಚೆ ।ಪುಲ್ಲಶರನೈದಿಕ್ರೀಡಿಸುತ್ತಿರಲುಸಕಲಳಲನುಳಿದುಸುಖಿಸುತ್ತೆಮಗುಳೇ॥೩೯॥ಯನ್ನ ನಗಲ್ದಿಂತುಬಳಲಿಸಿದಮತ್ಕಾಂತನನೂ॥ಯಿನ್ನು ಬಿಟ್ಟೊಡೆಯುತ್ತಪ್ಪೋದವನೋಬಡೆನೆನುತ। ಚನ್ನಾಗಿಬಿಗಿಯಪ್ಪಿಸಂತಸದಿಕಣ್ದೆರೆಯಲೊಡನೆಯವೃಸ್ಯನಾಗೇ ॥ ವುನ್ನತಮುಹಾದುಃಖದಿಂದೆದ್ದುತಡವರಿಸುತೆನ್ನ ಕಾಂತನಕಾಣಿರೆಯಿಾಗಬಂದಪ್ಪ । ತೆನ್ನೊಳಿಸಿಯುಗಲಿಪ್ಪೋದನುಪುಡುಕಿತಂದಿತ್ತುಳಿವೆಯಿಲ್ಲವೆಪ್ರಾಣವಾ ॥ ೪೦ ॥ ಕಳವಿನೆನಲಾಸಮಯಕಶಿವಸಂತಂ ಮಂದಾನಿಲವಂಸೆಸೊಗೆಶುಕಪಿಕಭ್ರಮರಪಕ್ಷಿಸಂ । ಕುಳಕೆದೂರಲ್ಕಂಡಕಡೆ ವಿಷಗಾಳಿಯರಸುತಪ್ಪೋಗೆಶಶಿವಸಂತರ್ ॥ ತಿಳುಪಿದರುಯಿಾಶಬೆಸನಿತ್ತ ನಿನ್ನ ಕಂಗಳುಮುಚ್ಚಿ ಮನದಿ ನೆನೆಯಲ್ಬಂದುತೋರಿದೊಡೆ। ಕಳವಳಿಸಬ ಡಸಾಕಾರದಿಂಬರ್ಪನಕೆಯೆಂದವರುಅರುಹಲೊಡನೇ ॥ ೪೧ ॥ ತಾನುತನ್ನೊಳುತಿಳಿದುನಿಕ್ಕೈಸಿಚಿಂತಿಸುತೆ । ಮಾನುನಿಯುಮರಕೆವೈಯಿತ್ತುಕುಳ್ಳಿರ್ದು ದುಂ । ಮಾನದಿಪಲವನೆಣಿಸುತ್ತಿರಲುತದ್ವನವಪಾಲಿಸುವನೋರ್ವನೈದೀ ॥ ಕಾಣುತ್ತಲೀಲೋಕದೊಳಗಿಲ್ಲಯಿಂತಪ್ಪ । ನೂನಸುಂದರನಾರಿಯುಮಾನ ಲೋಕದಿಂ। ದೇನಿಮಿತ್ತದಿಮಿಲ್ಲಿಗೈತಂದಳೊತಮ್ಮನಾಳ್ದಂಗೆಪೇಳ್ವೆನೆನುತಃ॥ ಪರಿಪಕ್ವಫಳಮುಪುಪ್ಪೊಟ್ಟಂಗಳಂಕೊಂಡು। ಭರದಿಂದಲೈದಿಮುಂದಿರಿಸಿವಂದಿಸಿನಿಂದು । ಕರಕಮಲಗಳಮುಗಿದುಮೊಗಮನಿಟ್ಟಸಲರಿದು ಶಂಬರವ ನೊಲಿದೂ॥ ಕರೆದುಸನ್ನಿದಿಗೆಕಣ್ಣಿನಸನ್ನೆ ಯಿಂಬೆಸಸಿ।ಧರಣೀಶಚಿತ್ತೈಸು ನ್ನ ಬಿನ್ನಪನಮ್ಮ । ಮೆರೆವವುಪವನದಕೊಲತೀರದತಳಿತವಟಭೂಜಮುವ ನೆವಿಸ್ಮಾ ॥ ೪೨ ॥ ಯಾವಲೋಕದಲಿಂದಲಿಳಿದುಬಂದಿಹಳೊಭೂದೇವಿಯೆ ಮಾತೆಸಿರಿದೇವಿಯೊವನದಾದಿ । ದೇವಿಯೊನಾನರಿಯೆನೋಡಿದೊಡೆ ಬಳ್ಳಿ ಚಂಪೊಳೆದೊಲಾದುದೆನಗೆ । ಆವನುತೆಯೆನ್ನು ನಿಂದೀಕ್ಷಿಸಲುಕಣ್ಬೆರದ ಭಾವಿಸೆನ್ನು ವನುನೋಡದೆಮಾತನಾಡದೆ। ಯಿಾವಿದದೊಳಿರಲುಬಂದರುಪಿ ಯಸಲು ಶಂಬರಕುಂಭಿನೀಶಕೇಳೀ ॥ ೪೪ ॥ ವಚ್ಛಿತಾದದುಪ್ಪೋಗಿನೋ

ಮಾತಾಡಿಸುವ | ಳೆಲ್ಲವೃತಾಂತಮಂತಿಳಿವೆನೀಗಿಳೆಯಪೆ | ಣ್ಣಲ್ಲವೆಂದೊನಪಾ ಲಪೇಳ್ದ ವಾಕ್ಯಕ್ಕೆಸದೃಶವಕಾಣುವೆನೆನುತ್ತೇ || ಅಲ್ಲಿರ್ದಸಭೆಯಬೀಳ್ಕೊಟ್ಟು ಮಂತ್ರಿಯಸುಖರ | ಸಲ್ಲೀಲೆಯಿಂದೆಬಳಿಗೊಂಡುವಸಮಣಿಮಯದ ! ಪಲ್ಲಕ್ಕಿ ಮುಮನೇರಿ ಛತ್ರಚಾಮರದವಿನಿ ಯೋಗದೊಡನೈತರುತ್ತೇ || ೪೫ || ನಿಲ್ಲ ದೆತಪ್ಪನವನೋಡುತ್ತೆ ಪ್ರೊಕ್ಕುಸಂ | ಮುಲ್ಲಾಸದಿಂಬಂದು ಕೊಳದತೀರದಿತ ಳಿರ್ದ | ಪಲ್ಲವಾನ್ವಿತದತಣ್ಣೆಳಲತಂಪಿನ ಸಂಪಿನಿಂಕಂಗೊಳಿಸುವಾ || ಯ ಲ್ಲರುಂಚಂದ್ರವಟಿಯೆಂದುಕರೆವುತಲಿಹರು | ಯಿಲ್ಲಿಗಿಳಿತಂದುಸತ್ಕುರುಹತೋ ರ್ಪಂತೆಮುದ | ದಲ್ಲಿಬೆಳಗುತ್ತವಟಮೂಲಮು ಮನಾಶ್ರೈಸಿರ್ಪಮಳಶಶಿಮು ಖಿಯಭಾ || ೪೬ || ನೋಡಿದಾಗಳೆಕಣ್ಗೆ ಕೋಟಿಮಿಂಚುಗಳೊಂದುಗೂಡಿ ಪ್ರಜ್ವಳಿಸಿಮೂರ್ಛೆದುಬಾಣಂಗಳಂ ಜೋಡಿಸಿಯೆಯಿಕ್ಷುವಿಸಿಖಾಸನಕೆ ತೊಡಿ ...ಸರ್ವಶಕ್ತಿಯಲಿಶಳೆದೂ || ಹೂಡಿರ್ದಗುರಿಯನೆಚ್ಚಂತೆಸೆಯೆನಟ್ಟುರ ... ತೋಡಿಬೆನ್ನಿಂದೂರ್ಚಲೊಡನೆಸಂದು | ರೂಢಿಯೊಳುಬಿದ್ದುಯತಿ ವಿರ ...ಗ್ನಿಯಿಂದೆಬೇಗುದಿಗೊಂಬುತಿರಲಾಗಳೊ || ೪೭ || ಘಳಿಲನೆಮಂತ್ರಿಮು ...ರುನೆರೆದುಪಿಡಿದೆತ್ತಿ | ತಳಿರ್ದಮಾಕಂದ ಛಾಯದಲಿಕೋಮಲಪತ್ರ | ಗಳ ಪಾಸಿಯರೆವಿರಿದಮಲ್ಲಿಗೆ ಯಹರಹಿತಣ್ಜಲದಿಧೂಮ್ರಾಬರವನೂ || ನಲವಿಂ ದೆತೊಯ್ದಿರ್ದಪಾಸಿಮಲಗಿಸಿವೇಳೆ | ಯಲರ್ದಪ್ರಸೂನಮಂಪೊದಿಸುತ್ತದ ರಮೇಲೆ | ವುಳಿದವಸ್ತ್ರಮನುಬಾಸಣಿಸಿಗಾಳಿಯು ಬೀಸಿಶೈತ್ಯೋಪಚಾರಂ ಗಳಿಂ || ೪೮ || ಸ್ಮರನುರಿಯನಾರಿಸುತಮೆಲ್ಲನೆ ನುಡಿಸಿದೊಡೆ | ಮರದಿರ್ದ ಮೂರ್ಛೆಯುತಿಳಿದುಚೇತರಿಸಿಕ | ಣ್ದೆರೆದುಮಂತ್ರಿಯಮೊಗವನೋಡಲವ ಮಧುರಸಮನುರೆಪಾನಗೈಸೆಂದನೂ || ಧರಣೀಶಪರನಾರಿಯರಮನದನಿಲುಕ ಡೆಯ | ನರಿಯದೆಮನದಿಭ್ರಮಿಸಲುಬಪ್ಪುದತಿಬಾಧೆ | ಅರೆಯಿಲ್ಲದೆಮನ ದನಿಶ್ಚಲನೆಯಿಂದಲೀಕ್ಷಿಸಲು ಸ್ಮರನೇಗೈಯ್ವನೂ || ೪೯ | ಯಾವನಿಬರವ ಳನೀಕ್ಷಿಸಲಿಲ್ಲೆಯಮಳಸ | ಸದ್ಭಾವದಿಂಮಾರನೇಗೈದಪ ಸೊಕಾಣುತ್ತ | ನೀವುವಿಕಳತೆಯಿಂದಭ್ರಮಿಸಲಿನಿತಾಯ್ತುನಿಶ್ಚಲನೆಯಿಡಿ ಮನದೊಳೀಗಾ || ಯಾವನಿತೆಯುಳ್ಳನುನಾನುಡಿಸಿ ಬಂದಪೆನೊಲಿದು | ಸಾವಧಾನದೊಳಿರ್ಪುದೆಂ ದುಯಪ್ಪಣೆಗೊಂಡು | ಕಾವನರಸಿಯಬಳಿಗೆಬಂದು ಸನ್ಮಂತ್ರೀಶಸುಚಿತ್ತ ದಿನ್ನಿಲ್ಲುತೇ || ೫೦ || ಮೆಲ್ಲನೆತಾಯೆನೀನಾರಕುವರಿಯುತವೆ | ನಲ್ಲನಾರೇ ನಾದನೋರ್ವಳೆಯಬಲೆನೀ | ನಿಲ್ಲಿಗೇಕೆತಂದಕಾರಣಮೇನು ಪಾಜಪೇಳು

ಪೇಳೆಂದುಬೆಸಸೇ ॥ ನಲ್ಲೆಯುವೆದೆಗದುನೋಡದೆ ಮಾತನಾಡದೆ । ತಲ್ಲಣಂ
ಗೊಳದೆನೆಲನನ್ನಿಟ್ಟಿಸುತ್ತೆತಂ । ನಲ್ಲನಗಲಿದ ಚಿಂತೆಯಿಂಸುಮ್ಮನಿರಲುಮಂ
ತ್ರೀಶಮಗುಳಿಂತೆಂದನೂ ॥ ೫೧ ॥ ಯೆಲೆತಾಯೆನೀನುನಾಡಾಡಿ ಪೆಣ್ಣಲ್ಲ
ಭೋ । ವಳಯದೊಳುನಿನ್ನ ಪೋಲುವರಿಲ್ಲಯವ್ವನದಿ । ಚಲುವಿನಲಿಸಕಳಾಕ
ಳಾವಿಲಾಸದಿಯಿಂತಿಸುಂದರಿ ನಿರಾಶ್ರಯದೊಳೂ ॥ ಲಲನೆಯರು ಯೆಕಾಕಿ
ಯಾಗಿಸುಳಿದೊಡೆನೋಡಿ । ಯಳಸಿವ್ರತಗೆಡಿಸುವರುಕಾಮು ಕರುನೀನಿನ್ನ ।
ನೆಲೆಯಮಾಜದೆಪೇಳುನಾಥಳಾದೊಡೆತವೆ ಮನದಂತೆನಡಸಿದಪೆವ್ರೊ ॥ ೫೨ ॥
ಪುರಮಥನನಂಗನೆಯೊಹರಿಯರಾಣಿಯೊ ಯಜನ । ವರಸತಿಯೊಪೇಳುವರು
ಯೆಂಗವುರಬಾಯೊಳಂ।ಕೆರೆಹಿಂಗಲೀಸದೆ ಮಡಗಿಕೊಂಡಿಹರ ವರಾವಕಾಲಕ್ಕ
ಗಲದೇ ॥ ಸುರಯಸುರನಾರಿಯರು ಭಾವಿಸಲುನಿನ್ನಯ । ಚರಣಾಂಗುಲಿ
ಯನಖವಪೋಲರಿಯರುಸುಮ್ಮ । ನಿರದೆಮೊಗವೆತ್ತಿನಿಮ್ಮಯಸಹೋದರ
ನೆಂದು ಭಾವಿಸೌಕಪಟಮುಳಿದೂ ॥ ೫೩ ॥ ಆಸಚಿವನಿಂತುನಿರ್ಮಲಚಿತ್ತದಿಂ
ಬೆಸಸ । ಲಾಸುಮುಸುಶರನರಸಿಮುವನನಿಶ್ಚಲದಸ । ದ್ಭಾಷೆಯನ್ನೆರೆಕೇಳಿತಿಳಿ
ದುತನ್ನಂಪಡೆದವಟೆಯುಸಮುಗ್ಯೈದುವಲಿದೂ॥ಕ್ಲೇಶಮುಮನುಳಿದುಮೊಗವೆತ್ತಿ
ಯವೆದೆಗೆಯಲೊಡ। ನೆಸುರಿವಶೋಕಾಶ್ರುವಿಂದೆಕಣ್ದಿರದುಪರ।ದೇಸಿಯಳನಿಂ
ತುದ್ಯೈನ್ಯದಿನುಡಿವುದೇನು ಮಜ್ಜನಕತಾಮರುಗಲಿಲ್ಲಾ ॥ ೫೪ ॥ ಯೇನಪೇಳೆ
ಲಿಯಣ್ಣಯನ್ನುತನಿರ್ದೈವ । ಮಾನುನಿಯರುಗಳುಪುಟ್ಟಲಿ ಬ್ಯಾಡಯಿಳೆಯೊ
ಳಗೆ । ಮೌನಿಗಳ ಮೌಳಿಯತ್ರಿಜನಾತ್ಮಸಂಭೂತೆರಲಿದೇವಿಯನ್ನಾಣ್ಮನೂ॥
ವಿಾನಕೇತನುಮೂರು ಲೋಕಮೋಹನಗಾರಸಾನುರಾಗದಿಕುಸುಮವತಿಯ
ಪಟ್ಟಣದಿಯಾ ।ನೂನಸೌಭಾಗ್ಯಸಾಮ್ರಾಜ್ಯಸಂಪತ್ಕರದಿವುಸುರೊಡಲಿನಂತೀ
ರ್ವರೂ॥೫೫॥ರತಿಕಾಮರುಗಳುವ್ಹೊಬ್ಬಬ್ಬರನುಕೆರೆಹಿಂಗ।ದತಿಶಯಮ್ಮಪ್ರತಿ
ಮರೆಂಬುದನುಯರಿಯರೆಸತತಸರಸೋಕ್ತಿಯಿಂ ಗಂಡಭೇರುಂಡನಂತಿರ್ದೆಮ
ನವರತವೀ ॥ ತತಕ್ಷೀರನೀರಭೇದಿಪಹಂಸನಂತೆಬೃಹ । ಸ್ಪತಿಯೈದಿನಾಕನಿ
ಲಯಾನುಕಾಯೆಂದು । ಯಾಣತಿಗೈಯ್ಯಲನು ಮತಮನುಗ್ರಹಿಸಿ ಯೊಶನ
ತಪೊವಿಷ್ಣು ಮಂಗೈಯ್ಯಲೂ ॥ ೫೬ ॥ ಸ್ಫಟಿಕಸಂಕಾಶನತಿಕೋಪದಿಂತನ್ನ
ಗ್ರ । ನಿಟಲನೇತ್ರನಲದಿಂದಹಿಸಲಾಂಪೋಗಿಷಣಿ । ಕಟಕನಂಘ್ರಿಗೆಯರಗ
ಲವರುಮುತ್ತೈದೆಯಾಗೆಂದುವರಕೆಯನಿಯ್ಯಲೂ ॥ ಘಟಮನುರುಹಿದಿರಿಮು
ತ್ವತಿಯಮುತ್ತೈದೆಯಪ।ದಿಟವಾವುದೆಂದುತಾಂಮಗುಳೆವಂದಿಸಲಭವ । ಸ

ಟಿಪ್ರೋಪುದಲ್ಲಮದ್ವಚನನಿನ್ನಯಕಾಂತನುವಿಸಿ ಬಹಪ್ರೋಗೆನಲ್ಕೇ ॥ ೫೭॥ ಬಂದೆನರಸುತ್ತೆಗಿರಿಗಹ್ವರ ತನುಲತಾಂ । ಸಂದೋಹನದಿವಳ್ಳ ಘೋರವಿಪಿನಾಂತರದಿ । ಸಂದುಖಗಮೃಗದ ಭಯುವನ್ನು ಶಂಕಿ ಸದೆವ್ಯಾಕುಳತೆಯಿಂಬಿಸಿಲೊಳೂ ॥ ಬೆಂದುಬಾಯಾರಿನಡೆಗೆಟ್ಟು ತಾಪಿಸುತಲೈ । ತಂದುಯಿಾಮರಛಾಯದತಂಪಿನಲಿಕುಳಿತೆ । ತಂದೆಕೇಳೆನ್ನಪ್ರೋಲುವದೇಸಿಕರುವಳರೆಯುನುತಕಂಬನಿಗರೆಯಲೂ ॥ ೫೮ ॥ ಕೇಳಿಮಂತ್ರೀಶಕಂಬನಿದಂದು ಕರುಣದಿಂಕಾಲಗತಿಯೊರನುಳುಹಿದುದಿಲ್ಲವಕಟಕಟ । ಶೂಲಿಯಂತಿರಕನೆಂದೆನಿಸಿತ್ತುಹರಿಯನುರೆಹತ್ತುಭವದಲಿ ಬರಿಸಿತೂ॥ ನಾಳಿಕೋದ್ಭವನಶಿರಗಳೆ ಸಿತ್ತುಸುರಲೋಕ । ಬಾಲಕನವಪುವ ಭಗಮುದ್ರೆಗಳನೊತ್ಯಮರ । ಜಾಲಮಂಪಶುಗಳೆಂದೆನಿಸಿತ್ತುಮುನಿಜನರವ್ಯೆಗೆ ಬೂದಿಯಪ್ರೂಸಿತೂ ॥ ೫೯ ॥ ರವಿಗಳಂಶಾಪದಗ್ಧರೆಂದೆನಿಸಿತ್ತು । ಮವನೀಶಹರಿಶ್ಚಂದ್ರನಂಕಾಡಗಾಯ್ಸಿತ್ತು । ಅವಿರಳನ್ನಳನದೇಭ್ರಷ್ಟರೆನಿಸಿತ್ತುಧರ್ಮಜನದಮ್ಮನೆ ದಣಿಸಿತೂ ॥ ಯುವತಿನೀಕೇಳಮ್ಮನಿನ್ನಂತೆಯತಿಕಷ್ಟ । ಮವಬಟ್ಟರುಂಟುಮಾಚಂದ್ರಮತಿದಮಯಂತಿ । ತವೆಸೀತೆಕೊಂತಿಯರುಯತಿ ದುಃಖವನುಭವಿಸಿಮರಳಿಸಿರಿಯಂಬಡಿಯರೇ ॥ ೬೦ ॥ ವಿಧಿವಶಾಕೃತಿಯ ವಿೂರುವರಾರುತ್ರಿಜಗದಿ । ಮದನಾರಿವಾಕ್ಯದಪ್ಪದುಬರ್ಪಪರಿಯಾಂತ । ಸುದತಿಯುನಿರಾಶ್ರಯೆದೊಳಿಹುದಲ್ಲನೀನಧಮತರಳಲ್ಲವತಿಸ್ವರೂಪಿ ॥ ಮುದದಿನಮ್ಮಯನೃಪನಮನೆಯನಾರಿಯರೊಡನೆ । ಕುದಿಯದೆವುಂಡುಟ್ಟು ಪದುಳದಿಂದಿರಲಾಗಿ । ಬೆದಕುತ್ತತತ್ಕಾಂತಬಂದವನುಬರ್ಪುದು ಚಿತಮುವೆುಂದು ಕರೆಯಲೊಡನೇ ॥ ಅಣ್ಣಕೇಳರ್ಥಮಾಯಯುಧಪುಸ್ತಕಂ ಮಣಿಗ । ಳೆನ್ನ ಪರರಲ್ಲಿಮಡುಗುವದೆಯುಸದಳದಿವ್ಯ । ಕನ್ಯಾಸುರತ್ನ ಮುಮನೆಂತುಯಿಡುವರು ಯಿಡಲುತಮ್ಮಸಹೋದರೆಂದೂ ॥ ಚನ್ನಾಗಿಭಾವಿಪರೆಮ್ಯಾಲೆ ಧೊರೆಗಳಮನಯೊಳೆನ್ನ ಸುಳು ಹಲುಮವರುಯಳು ಪಿದೋಡೆಬಿಡಿಸುವರೆನಿನ್ನಿಂದಲಹುದೆ ಯಾನಬಲೆಯತಿಪತಿವ್ರತೆಮನ್ಯಪುರುಷರುನಮ್ಮಯಾ ॥ ೬೧ ॥ ಪಡೆದವ್ರುಡುಪತಿಯಣ್ಣ ಬುಧರಸಮವೆುಂಬ । ದೃಢಶೀಲ ಚಿತ್ತಳ್ಳೆನಾನು ಮಾನಾನ್ವಿತೆಯು ಪ್ರೌಢವಿಪನಮತಿಯೊಳಿಡೆಗೊಂಡೆಂತುಬಾಳ್ವದೆನು ಸ್ತ್ರೀವೇಷವತಿಗಳೆವುತೇ ॥ ಜಡೆಗಟ್ಟಿತಲೆಯುವಲ್ಕಲನುಟ್ಟುಭಸಿತವನು । ವಡಲಿಗಾಂಲೇಪಿಸಿಯೆ ಸೋರೆದಂಡಗಳಪಿಡಿದು । ವಡಸೆಫಳಹಾರದಿಂಪಶಿಯು ದೊರವನಕಸನ್ಯಾಸ ವೇಷದಿಪ್ರೋಗು

ವೇ ॥ ೬೩ ॥ ರತಿದೇವಿನುಡಿದ ಯತಿವೈರಾಗ್ಯಮಂಕೇಳಿ । ಪ್ರತಿಯುತ್ತರಂ ಗೊಡದೆಯಾಕೆಯೇತನ್ಮಾತ್ರ । ಪತಿಯಲ್ಲಸರಮವಿರತಿಯುಳುಯಿಂತಪ್ಪಪತಿ ವ್ರತೆಯಿರ್ದನೆಲಪಾವನಾ ॥ ಕ್ಷಿತಿಪಶಂಬರಸುರನಮನ ದಯೆಂತಸ್ತಿ ನಾನತಿಶ ಯವತಿಳಿಯದೆಬಲಾತ್ಕರಿಸಲ್ಯಾಕೆನುತೆ। ರತಿದೇವಿನೀನೆತ್ತಚಲಿಸಬಿರು ನಮ್ಮಾ ಳ್ದನಂಬೆಸಸಿಬಹೆನೆನುತ್ತೇ ॥ ೬೪ ॥ ಮರಳಿಮಂತ್ರಿನೈತಂದುಶಂಬರನೆಡೆಗೆ । ಕರಕಮಲಗಳಮುಗಿದುಮವಳಯಾದ್ಯಾಂತಮಂ॥ಯರುಹಿಕರೆದೊಡೆಬಾರಳತಿ ಪತಿ ವ್ರತೆಸೀಲೆಪರಪುರುಷರುಗಳುತಮ್ಮಾ॥ ವರಜನಕನಗ್ರಜರಸವು ಯೊಜನ ರೊಳಂ।ಯಿರಲುತನ್ಮಾನಮಾಣಿಕ್ಯಮುಸುಳಿಪುದೆಂದುತೊರೆದುಸ್ತ್ರೀರೂಪುಮಂ ಸನ್ಯಾಸವೇಷಮಂ । ಧರಿಸಿದೇಶಾಂತರಕ್ಕೇ ॥೬೫ ॥ ವುಜ್ಜುಗಿಸಿಕೊಂಡಹಿಳೆ ಮ್ಯೇಲೆಯತಿ್ರಜಸುತೆಯು । ಮಬ್ಜವಿಸಿಖನರಾಣಿಯತಿಪತಿ ವ್ರತಸೀಲೆ । ಸಜ್ಜನೆಯುಯಿಂತಪ್ಪಘನತೆಯಬಲೆಯನೋಡಿ ಬಿಡಲುಬಹದಪಕೀರ್ತಿಯೂ। ತಜ್ಜನನಿಸಮವೆಂದುಭಾವಿಸಿಯೆಕರದೊಯ್ದು । ಸಜ್ಜಿವನೆಯೊಳಗಿಟ್ಟು ಪೋ ಷಿಸಲುಬಹುತೀರ್ಥ । ಸಜ್ಜನಳಕಗೈದಸತ್ಫಲಮಹುದು ಮಾಪುಣ್ಯಶಕ್ತಿದರ್ಶ ನಮಾತ್ರದೀ ॥ ೬೬ ॥ ಆಕೆಪತಿವ್ರತಧರ್ಮಕಂಮೆಚ್ಚಿವಲಿದುಭ। ಸ್ಮಾಕಾರ ಮಾದಪುರುಷನುವುದಿಸಿಬಹನೆಂದು । ಕಾಕೋದರಾಭರಣನಮಳಕಾರುಣ್ಯಾ ಮುಪಡೆದುಪ್ರೋಪಳುಪುಡುಕುತೇ ॥ ಸಾಕಾರದಿಂದತತ್ಪತಿಬರ್ಪವರಿಯಂ । ತ ಜೋಕೆಯಿಂಸತ್ಕರಿಸಲತಿ ಪುಣ್ಯಸತ್ಕೀರ್ತಿ । ಭೂಕಾಂತನಿಮ್ಮಮನದಂತಸ್ತು ವೆಂತಿರುದೋನಾನುತಿಳಿದುದನು ಸುರ್ದನೂ ॥ ೬೭ ॥ ಅವರಸುಸಚಿವನಿಂತೆ ನಲುಶಂಬರನೆಂದ । ನಾವುಕಾಣದೆಯಿರ್ದೊಡೆತ್ತ ಪೋದಡೆದೋಷ। ಮಾವರಿ ಸದೆಮ್ಮ್ಮವಂಕಂಡುಕಾನನಕೆಬಿಟ್ಟೊಡೆಪಾವಪಸಕೀರ್ತಿಯೂ ॥ ಆವನುತೆಯು ಳುನುಕರದ್ಯೊಯ್ದುತಮ್ಮನೆಯೊಳಿಟ್ಟುಪ್ರೋಷಿಸುವೆನೆಂ । ದೊಡದುಯಂತ ಹುದೊ । ಯೊವ್ವಭಯಸಂಕಟಕ್ಕೇನನೆಂಬೆನುಮುಂದೆ । ದೇವರಾದೀನದಿಂ ಬಂದುವಂಬರಲಿಬಿಡಬಾರದ ಬಲೆಯುನಡವಿಗೇ ॥ ೬೮॥ ಕರೆದೊಯ್ದುತಮ್ಮ ನೆಯೊಳಿಟ್ಟುಪ್ರೋಷಿಸುವೆನೆಂ । ದಿರದೆದ್ದುಮಂತ್ರಿಸಖರೊಡವರಲುಬಂದು ಯಾ । ಸ್ಮರನರಸಿಯಳನು ನಿಶ್ಚಲಚಿತ್ತದಿಂನೋಡಿ ಮನದಿಸಂತಸದಳೆವುತೇ॥ ತರುಣಿತತ್ಪುರುಷನೇಳ್ತರ್ಪನಕ ವಮ್ಮನುಂ । ದಿರದಿವುಂಡುಟ್ಟುಸುಖಿಸೌನೀ ನು ಯತಿಸಖಿಯು । ಲ್ಮಾರರಾಜನರಸಿಗಡಯು ಬಲೆನೀನೆಂತುದೇಶಾಂತರಂ ಗೈಯ್ದೆಯಕಟಾ॥೬೯॥ಯೇನುಯನುಮಾನಿಸದೆಬಾರೆಂದುಕರೆಯೆರತಿತಾನೊ

ಲಿಮುಯಿಂತೆಂದಳೆಲೆ ಯೈಯ್ಯೈಕರದಪೆಯು । ನಾನುಪೆಣ್ಣಾತ್ತಿಯ ನಾಥಳು ಮೆಂದುಮನದೊಳಳುಪಿದೊಡಾಯು ಕ್ಷೀಣಮಹುದೂ ॥ ಸೂನುವೆಂದೆ ನ್ನಬಗೆದೊಡೆ ಪರಮಯ್ಯೈಶ್ವರ್ಯಮಾ । ನುಸಿಯುನಿಮಗೆ ಕೈವಶವಹ ಳುಸಹಜದಿಂಭೂನಾಥನೀನಿದಕೊಡಂಬಡಲು ಬಂದಪೆತಪ್ಪಿದೊಡೆಬಾರೆನೆನ ಲೂ ॥ ೭೦ ॥ ದಾನವೇಶ್ವರಕೇಳಿತದ್ವಾಕ್ಯಮುನುನೋಲಿದು । ನೀನುಪತಿ ವ್ರತೆಪುಣ್ಯದೇವತೆಯುತತ್ಕತವಿ । ನಾನುಭೋಜನವಮಾಡಲುಜನ್ಮಸಾರ್ಥಮ ಪ್ಪುದುಬರ್ಪುದೆಂದುಕರೆಯೇ॥ಮೊನಾಂಕನರಸಿತನ್ಮನದಿನಿಶ್ಚೈಸುತ್ತೆ । ನಾ ನುನತಿಶೀಲದಿಂದರಲುಯುಳುಪಿದೊಡೆ । ತಾನೆತತ್ಫಲವನನುಭವಿಸುವನುಯಂ ದೊಡಂಬಟ್ಟಳಾಬಟ್ಟನನೇ೭೧॥ ಸಕ್ಕರೆಮಧುರಾಧರೆಯೆಕೇಳುಮನವಲಿದು। ಮುಕ್ಕಣ್ಣನಾರಾತಿರತಿವಡಂಬಡಲು । ಅಕ್ಕರಿಂಶಂಬರಸುರೇಂದ್ರಸಂತಸದಿಕ ಣ್ಣಿನಸನ್ನೆಗೈಯ್ಯಲೊಡನೇ ॥ ಘಕ್ಕನೆಮಣಿಕನಕಮಯದಿಪ್ರಜ್ವಳಿಪಪ । ಲ್ಲಕ್ಕಿಯಂಸಾರ್ಚಲದರೊಳುಮೂರ್ಛೆಗೊಳಿಸುತ್ತೆ । ಯಿಕ್ಕಿಗವಸಣಿಗೆಯ ಬಾಸಣಿಸಿಪೊತ್ತರುಕಾಲಮೃತ್ಯುವಿನಪೊತ್ತಂದದೀ ॥ ೭೨ ॥ ಮಾರಯನು ನೋಡಿಮುಹಿಷನುತನ್ನ ಮನದಿವಲವೇರುವಂದದಿಖಳಂ ಯುಧಿಕಸಂತಸದಿವರಿ॥ ಪರಿವಾರದೊಡಾರತಿದೇವಿಯುಳಕರೆದೊಯ್ದು ಮಣಿಮಯದನಿಳಯಪ್ಪೊಗಿಸೀ। ವ್ಪೋರಂತೆತನ್ನ ನಿಜಸತಿಸಹಿತವುಳಿದಖಿಳ । ನಾರಿಯರಿಗರುಹೆಮುವಳಾದ್ಯಾಂತ ಮುಮನೆಲ್ಲ । ಮಾರನಂಗನೆರತಿದೇವಿಯು ತಿಪತಿವ್ರತೆಸ್ಥಿರಸುವಾಸಿನಿಯೊಕೆ ಯೂ ॥ ೭೩ ॥ ವರಸುಹಸ್ತದಿಪಾಕಗೈದರಸದ್ರವ್ಯಮಂ । ನಿರುತನಾಂನಿತ್ಯ ಭುಂಜಿಪೆನೆಂದುಬಾಣಸದ । ತರುಣಿಯೊಳೆಲ್ಲರ್ಗೆಹೆಗ್ಗಡಲೆಯೆಂದುನೇಮಿಸಿದ ನಾರತಿಯುಹಿತದೀ ॥ ಪರಮಪಾವನರೂಪೆಯೆಂದುಭಾವಿಸಿಯುಸುರನರಸಿಯ ತಿನೇಹದಿಂಸತ್ಕರಿಸಿಮನ್ನಿಸುತೆ । ಹೆರೆಹಿಂಗದಿದಿರ್ದುತತ್ಸಮಸುಖದೊಳಿಹುದು ತತ್ಪತಿಬರ್ಪತನಕೆನುತ್ತೇ ॥ ೭೪ ॥ ಜಲಜಲಪನದಭೃಂಗನಿಭಗುರುಳೆಕೇಳು ಮಾ । ಖಳನರಸಿರತಿಯುಪಲನಂದದಿಂಬೋಧಿಸುತೆ । ತಿಳುಪಿಮೈದೊಳಸಿಮ ಡಿಯುಡಲಿತ್ತುಸಹಪಂಕ್ತಿಯೆಲ್ಲಿಭೋಜನಮಗೈಸೇ ॥ ವೊಲಿದುಶಂಬರಗೆನಿತ್ಯ ದಲಿಬಹುವಿಧಪಾಕಗಳಮಾಡಿವುಣಿಸಿಮನ್ನಣೆಗೊಂಡುಕಾಲಮಂ । ಕಳೆವುತಿ ರ್ದಳುಸ್ಮರನರಾಣಿ ಪನ್ನಗವೇಣಿ ಶುಕವಾಣಿಪಿಕಸುಗಾನೀ ॥ ೭೫ ॥ ಯಿದು ವೆಬಾಣಾಖ್ಯಸಾಯುಜ್ಯಪ್ರಬಂಧ ಮತ್ತಿದುವೆನವಮೋಹನತರಂಗಿಣಿ ಯಭಿ ಧಾನ । ಯಿದನುಬಕೋಳೊರರಾಮೇಶನುಡಿಸಿದೊಡೆ ಪೇಳ್ವೆಶಂಕರನುವ್ರೊ

ಲಿದನೂ॥ ಯಿದನುಸರಸೋಕ್ತಿಯಿಂಬರೆ ದೋದಿಪೇಳ್ಕೇಳ್ವಸದು ಹೃದಯರಾದಸತ್ಪುರುಷರಿಗೆಸಂತಸದಿ । ಕುಧರಜಾರ್ಧಾಂಗಸೌಭಾಗ್ಯಸಂಪದಸೌಖ್ಯಮಿತ್ತುರಕ್ಷಿಸುವಬಿಡದೇ ॥ ೭೬ ॥

ಅಂತು ಸಂಧಿ ೮-ಕ್ಕಂ ಪದನೂ ೩೯೭-ಕ್ಕಂ ಮಂಗಳಮಹಾ.

॥ ಶ್ರೀ ಶ್ರೀ ಶ್ರೀ ॥

ಶ್ರೀರಸ್ತು.

—)*(—

॥ ಶ್ರೀಗುರುಬಸವಲಿಂಗಾಯನಮಃ ॥

ಶಂಬರನುರತಿಯನ್ನು ಮೋಹಿಸಿದ್ದು.

॥ ಪಲ್ಲವಿ. ॥

ಸ್ಮರನರಸಿರತಿದೇವಿ ಪರಿಪರಿಸುರುಚಿಪಾಕ । ಕರಮುಟ್ಟಿಮಾಡಿನೀಡಲುವ್ಯುಂಡುನೋಡಿ ಕಾತುರಗೊಳಲು ಯಸುರಂಗೆವಳಗಾಗದತಿಪತಿವ್ರತಥ

ರ್ಮದಿಂದಿರ್ದಳೂ ॥ ಪದ ॥ ಚಿತ್ರಕರಶೀತಾಂಶುಚಿತ್ರಭಾನುಸುಹಂಸ । ಚಿ
ತ್ರಭುಕ್ಷಣಾಮಣಿ ವಿರಾಜಿತಶ್ರವಣಯುಗ । ಚಿತ್ರದ್ವಿರದಾಸುರನಗರ್ವಗಿರಿ
ಶತಕೋಟಿಸುರದೀರ್ಘವರಕಿರಟೀ॥ ಚಿತ್ರವಪುತ್ವಕ್ಕಚಿತ್ತಟಬಂದನಿರ್ದಂದ।
ಚಿತ್ರಾಳಿಪೃನ್ನಿಳಯವಾಸಪುರನಾಶವಿ । ಚಿತ್ರಮಹಿಮಾಲೀಲ ಸಕಲಸುರಪರಿ
ಪಾಲರಾಮೇಶರಕ್ಷಿಸೆಮ್ಮಾ ॥ ೧ ॥ ಹರಿಯಜೇಂದ್ರಾದಿಗಳು ಮುರಿದುಮರೆ
ಯೊಗೆಕಾಯ್ದು । ಯಿರದೆವೈಷ್ಣವಿಯಾಗಿ ಹರಿವರೂಥಮುನಡರ್ದು । ಪುರಿ
ವಕಾಲಾಗ್ನಿ ಕೋಪಮೆತಾಳಿಭರದಿಂದ ಜೆಟ್ಟಸಂದಟಿಪ್ರೊಪ್ಪುತಾ ॥ ಯಿರದೆವಾ
ರ್ಮಲತುಪ್ಪುರಣಿಸಿಕಾಳ್ಗೆದರುತು । ಬ್ಬರದಿಮೇಲ್ವಾಲ್ವೈತರ್ಪಶುಂಭಾಸುರನ।
ಸಿರವನಿಮುಷದೊಳರಿದು ಚರಣದಿಮೆಟ್ಟೆಯಮರರನುಳುಹಿದಗಜೆಸಲಹಾ ॥
೨ ॥ ಪುರುಷರಲಲಾಮಸದ್ಗುಣಧಾಮಮತ್ಪ್ರೇಮ । ಸ್ಮರಕಳೆವಿಚಾರಯು
ನ್ನೆದೆಂಮನಪ್ಪುವವೀರ। ಸರಸಸಮರಸಸಾರಪೂರಗಂಭೀರಯುನ್ನಯಮನೋ
ಕಮಲಪೂರಾ ॥ ವರವೆಕುಚದೊಳು ಕರೆಯಲೋಯೆಂದುಸೌಂದರಗೆ । ಯಿ
ರದೆಪಡಿಪ್ರೊನ್ನಳಂತುಂಬಿತ್ತುಶಂಭುವಿನ । ಚರಣಕಮಲವಕೂರ್ತುಪಲವಾಂ
ತುಮೇಲ್ಗಳೆಯುಬಿತ್ತರಿಸುಚಿತ್ತಾಕ್ರಂತನೇ ॥ ೩ ॥ ಜಲಜಲಪನದಭೃಂಗನೀಲಾ
ಳಕದಜೆದರು । ದೆಳೆಹರಿಣಲೋಚನದಪಕ್ವಬಿಂಬಾಧರದ । ತಿಲಕುಸುಮನಾ
ಸಿಕದತೆಳುರ್ಪಸುರುಸುಳಿನಾಭಿಕಲಶಕುಚದಿಂದಲೆಸೆವಾ ॥ ನಳಿನಸಾಯಕನ
ರಸಿಯುಳೆಚಲುವಬಣ್ಣಿಪರು । ವಲವಿಂದವಳಕಂಡವರಿಲ್ಲನೀನೆಯನ್ನೊಲುಮೆ
ನೂತನರತಿಯೆಕೇಳುಮುಂಗಥೆಯ ಸಂಗತೆಯಸುರಸೋನ್ನತಿಯನೂ ॥೪॥
ಕಾಂಚನಸುಗಾತ್ರ ಕಳಹಂಸಪಾವನಯಾತ್ರ । ನೀಂಚಿತ್ತವಲಿದುಲಾಲಿಸು
ಮುಸುರ್ಪಮುಂಗಥೆಯ। ಪಂಚಬಾಣನರಾಣಿ ಪರಮಕಲ್ಯಾಣಿಶುಕವಾಣಿಕಾ
ಳಾಹಿವೇಣೀ॥ ಪಂಚಭಕ್ಷ್ಯವನುಪರಮಾನ್ನಾಯರಸರಸಾಯನಂಚದುರಿನಿಂ
ದೆಪರಿಪಾಕಮಂಗೈದೊಲಿದು । ವಂಚನಿಲ್ಲದೆಯಸುರದಂಪತಿಗಳಿಗೆನೀಡೆಷಡು
ರುಚಿಯೊಳುಂಡೂ ॥ ೫ ॥ ಪೊಲದಡಗಯಡವಿಸೂಕರದಪಿಸಿತಮುಹರಿಣ ।
ಗಳುಮುಖ್ಯಮೃಗಕುಲದಕಂಡಗಳಂಕೊರೆದು । ವಲಿದುಕರೆಗಳಲವಣಾದಿಸಂ
ಬಾರಮಂಪಾಕ್ಕೆಜೇಯಿಸಿಬೇಯಿಸೀ ॥ ಪಲಬಗೆಯಪಕ್ಷಿಗಳತರಿಸೀಯ್ಯಲವ
ಕೊರೆದು । ಸಲುವಸಂಬಾರದೊಡನವನುಪಾಕಂಗೈದು । ಜಲಚರಂಗಳಪೊ
ಟ್ಟೆಸೀಳಿನೀರಿಂತೊಳೆದು ವಗ್ಗರಣೆಯಿತ್ತಾಂಬರವಾ ॥ ೬ ॥ ಲೇಸಿನಿಂಮಾಡಿ
ನೀಡಲುನೋಡಿಕಂಣಿಂಗೆ । ತೋಷಕೈಗತಿಮೃದಂನಾಸಿಕಕೆಬಹುಕಂಪು ।

ಸೂಸುತಿರಲುಣಲುಜಿಂಹ್ವೆಗೆರುಚಿಯು ಯಾತ್ಮಂಗೆ ಸಂತೃಪ್ತಿಯಾಗಲೊಲಿ ದೂ ॥ ಆಸುರೇಶ್ವರಮುಗುಳಿಮುಗುಳೆನೀಡಿಸಿಕೊಳುತೆ । ತಾಸವಿದುವುಂಬುತಿ ರೆ ಪೊಡೆದಣಿದುಬಾಯ್ದಣಿಯೆ । ದಾಸುಮಶರನರಸಿಯುಳಹಸ್ತಕಮಲ ಪಾಕ ದ್ರವ್ಯದಾಸ್ವಾದವಾ ॥ ೭ ॥ ಅಸುರದಂಪತಿಗಳುಂಡುಂಡುಪರೆಹೆಚ್ಚುತ್ತೆ । ಶಶಿವದನೆರತಿದೇವಿಯುಂಕರೆದುಕಸ್ತುರಿಸಿ । ಮಿಸುನಿಮಣಿದೊಡಗಳನು ದಿವ್ಯ ದುಕೂಲಮಂತರಿಸಿಕೈಕೊಂಬುದನಲೂ ॥ ನಸುನಗುತೆಲೆಲೆಯೆಯ್ಯವುರುಷ ರಗಲಿದಬಳಿಕ । ಸಸಿನಮೆಮುರಳಿಬರ್ಪನಕವೂನುನಿಯುರುಂ । ವಸೆದುತಲೆಗೆ ರೆಮ ಬಿವ್ಯಾಂಬರಂಗಳನುಟ್ಟುಬಾಯ್ಕಿ ಚೈತಲೆಯತೆಗದೂ ॥ ೮ ॥ ಕುರುಳ ನತಿಕುಶಲದಿಂಮುಡಿಜಡೆಗಳಂಕಟ್ಟಿ। ಮರಿಸಿನವಗಂಧಕುಂಕುಮಪುಷ್ಪವಮಂ ಧರಿಸಿ । ಪರಿಪರಿಯಮಿಸುನಿರತ್ನಾಭರಣಮುಮನಲಂಕರಿಸುತ್ತಸೊಬಗಿನಿಂ ದೇ ॥ ತಿರುಗುವರಬಣಗುಜಾರೆಯರಲ್ಲದೆ ಯೇಕ । ಪುರುಷಭಕ್ತಿಯೆಸರ್ವ ಮಾಭರಣಗರತಿಯುಕು। ತರುಣಿಯರಿಗೆನ್ನ ಯಭಿಮಾನದಾಭರಣಮುಮನಿತ್ತು ರಕ್ಷಿಸುವೊಲಿದೊಡೆ ॥ ೯ ॥ಯನಲುನೆರೆಮೆಚ್ಚಿಕಳಪಲುಮುನ್ನಿನೋಲಿರಲು। ಘನಪ್ರಭಾಮಯದಮಾಣಿಕಕೆಮುಸಿಪೂಸಿದೊಡೆ । ಜುಣುಗಿವುಸುರ್ಗರೆಯ ದಿರ್ಪುದೆನೊದಲೆರತಿಯುಮುಲೋಲಾವಣ್ಯಯುತದಾ ॥ ವನಿತೆಯುರಮಂಡೆ ಮಾಣಿಕ್ಯತಾನಾದಕಾ । ರಣತನ್ನ ಸೌಂದರ್ಯವಾಜಿಕೊಂಡಿರ್ದಡೇಂ । ವಿ ನುಗದೆಮುಸುಳಿಪುದೆ । ದಿನದಿನಂಭೋಜನಂಗೈಸುತಿರಲಾಸ್ಮರನರಾಣೀ॥೧೦॥ ಆಕೆಮೃದುಪದತೋಳುತೊಡೆಜಘನಕಲಶಕುಚ । ರಾಕೇಂದುವದನೆಕನ್ನಡಿ ಕದಪುಮೃಗನೇತ್ರ । ದಾಕಟಾಕ್ಷಂತನುವಿನುತಿಕಾಂತಿ ಸರ್ವಮಯೆಲಾವಣ್ಯ ರಸತುಳುಂಕೀ ॥ ಆಖಳನಕಣ್ಮನದಿತುಂಬಿದಿನದಿನದಿ ಬಹುವ್ಯಾಕುಳಂಗೊಂ ಡುತಾನಿತ್ತಭಾಷೆಯಕಡಿಗೆ । ನೂಕಿತನುತಾಪದಿಂದವಳು ಪತಿವ್ರತೆಕರೆದೊ ಡಂಬಡಳೊಬಾರದಿರ್ದಾ ॥ ೧೧ ॥ ಮುನಿದೊಡೇನಪ್ಪದೊಯೊದುದಾಗಲಿ ಯಿನ್ನು । ತನುವಿನನುತಾಪತಂಬಿಸಲಾರೆನೆಂದು ಮೆ । ಲ್ಲನೆತನ್ನ ಸತಿಗೆಸೂ ಚಿಸಿದರತಿದೇವಿಯುಳತನಗೆವಶಮಾಡೆನುತ್ತೇ ॥ ವನುತೆಯುಂದಳುಮುಗುಳೆಯ ಲೆಕಾಂತಮರುಳೆಲಾ ॥ ಘನಪತಿವ್ರತೆಸೀಲೆ ಪುಣ್ಯದೇವತೆಯುದು । ರ್ಮನದಿಭ್ರ ಮಿಸಲಿಬ್ಬುಹುದೆಮನೆಯುದೀಪಕ್ಕೆಮುದ್ದಿಡುವರೆಪೌಢರುಗಳೂ ॥ ೧೨ ॥ ಮನದೊಳಂಪ್ರೀತಿಯಿಲ್ಲದಳರೋಗಿಣಿಪುಷ್ಪ । ವನುತೆಯುಳಸದ್ವ್ರತೆಯುತ ನ್ನ ನಿಜಸತಿಯಾಗ। ಲನುಕೂಲವಾಗದಲ್ಲದೆ ಬಲಾತ್ಕರಿಸಲಾಗದುಕೇಳುಸತ್ಸು

ರುಷರೂ ॥ ಜಿನುಗದಿರುವರನಾರಿಯರಿಗೆಳಸಿ ದೇವೇಂದ್ರ । ದಿನಪಶಶಿವಾಲಿ
ನಹುಷಂರಾವಣಾದಿಗಳು । ಅನುಗೆಟ್ಟುಭ್ರಷ್ಟಾದರೆಂಬುದನುನೀಬಲ್ಲೆಯಾ
ಕೆನಾಡಾಡಿಯಲ್ಲಾ ॥ ೧೩ ॥ ರೂಪಿಂಗೆಮರುಳಾಗದಿರುಶಲಭಪಣ್ಣೆಂದು ।
ದೀಪಕ್ಕೆಯರಗಿದಂತಹುದು ಉರುಗನಸರಸ । ಆಪೆಣ್ಣಿಗಿತ್ತಭಾಷೆಯುಯೇ
ನುಯುಪ್ರಮಾಣಕುಲನಾಶಮೆಂಬಶ್ರುತಿಯೂ ॥ ತಾವೇಳುತಿರಲರಿದುಭ್ರಮಿ
ಸುವರೆಸ್ತ್ರೀಯ್ಯು । ಪ್ರಾಣೋಪಂಗೆ ವೃತ್ತರಮನೀಯ್ಯೆಬಹುದೇಯುಂದು।
ಕೋಪಮುಂಮಾಡದಿರುನೃಪಮೂರ್ಖನಾಗೆ ಮಂತ್ರಿಗಳುಬುದ್ಧಿಯುಪೇಳರೇ॥
ಆಕೆಯುಮನಾಥಳಲ್ಲವಳರಸನಸಮನುಪಿ । ನಾಕಿಯುತಪ್ರೋಭ್ರಷ್ಟನಂಮಾ
ಡಿದಂ ಮೂರುಲೋಕಕೆವೀರವಿಜಯಂಪರಾಕ್ರಮಿ ದೇವದಾನವರುಗಳಬಿ
ದೇ॥ನೂಕಿಕುಸುಮಾಸ್ತ್ರಂಗಳಿಂದೆಚ್ಚುಯದೆಗೆಡಿಪ । ತಾಕಾಲವಶದಿತಡ
ಮ್ಮನೆಯೊಳಿಪಳಲ್ಲದೆ । ನೀಕಂಡುಕಾಮನೆಸಳ್ಗಣೆಗೆಗುರಿಯಾಗದಿರುಯೆಂದು
ತತ್ಸತಿಪೇಳಲೂ ॥ ೧೪ ॥ ರೋಗಿಗೆಕ್ಷೀರಶುನಕಗೆ ಘೃತಮರೋಚಕಮ ।
ದಾಗಿತೋರ್ಪಂತೆ ಕಾತೆಂಯುಪೇಳ್ದಬುದ್ಧಿಪಗೆ, ಯಾಗಿಪತಿಗುತ್ತರಮಯೊವ
ಸತಿಯುಳಿಗಧೋಗತಿಯೆಂದುಪೇಳ್ವನಿಗಮಾ ॥ ಪ್ರೋಗೋರ್ಜಲನುರಿಯಶರಪತಿ
ಯಿಂದಬೇಯ್ವುವಗೆ । ಯೋಗುವದೆ ಯೀನೀತಿಶಾಸ್ತ್ರದಿಂಶಮನಸುವ । ನೀ
ಗುವೆನು ದಶಯುವಸೆವದಗುತಿದೆಶೀಘ್ರದಿಂಪ್ರೋಗಿ ನೀಂತಿಳಿಸೆನ್ನೆಲೂ ॥೧೬॥
ಸುಪತಿಯೋಚಿಸಿತಿಳಿದುತನ್ನೊಳಗೆ ಯೆಣಿಸಿದಳು । ಮೊದಲೆಮರ್ಕಟಮದ್ಯ
ಪಾನಮುಂಮಾಡಿಸಲು। ಅದರೊಳಂವೃಶ್ಚಿಕದಷ್ಟವಾಗಲುಮದಕೆಭೂತಮಿರ
ದೆಶೋಂಕಿದಾ॥ವಿಧವಪುದುಮಿವನಸುರಮಧುಗುಡಿಗಯೆವ್ವನಿಗ। ಮದನಗ್ರ
ಹವ್ಯಾಧಿಗಂಮಂತ್ರೌಷಧಿಲ್ಲಮೇ। ಬುದುಸಪಜಮಾಯ್ತುನಾತನಗೆ ಶತ್ರುವೆ
ಹಿತವಳೆಂದುತಾಂತಿಳಿಯನಕಟಾ ॥ ೧೭ ॥ ದಾರಿಯಂಪಿಡಿದು ಪ್ರೋಗುವಮೃ
ತ್ಯುದೇವತೆಯ । ಪ್ರೋರಂತೆಕರೆದು ನಗರಮಪ್ರೊಗಿಸಿಕೊಂಡಂತೆ । ಯಾರ
